**Re.No. D. 221**

भारत का राजपत्र
The Gazette of India

# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

| | |
|---|---|
| भाग IX | अनुभाग 1 |
| **PART IX** | **SECTION 1** |
| ಭಾಗ IX | ವಿಭಾಗ 1 |

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | |
|---|---|---|
| सं 1, नई दिल्ली, बुधवार , 07 जून, 2023 | ज्येष्ट 19, 1945 (शक) | खंड.53 |
| No.1, New Delhi, Wednesday, June 07, 2023 | Jyeshtha 19, 1945 (saka) | Vol. 53 |
| ನಂ.1, ನವದೆಹಲಿ, ಬುಧವಾರ, ಜೂನ್ 07, 2023 | ಜ್ಯೇಷ್ಠ 19, 1945 (ಶಕ) | ಸಂಪುಟ.53 |


**Ministry of Law and Justice**
(Legislative Department)
New Delhi, 07th June, 2023

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 07ನೇ ಜೂನ್, 2023**

The Translation in Kannada of the following Acts, namely:- (1) THE EMIGRATION ACT, 1983 (NO.31 OF 1983) (2) THE FOOD SAFETY AND STANDARDS ACT, 2006 (NO.34 OF 2006) (3) THE PAYMENT AND SETTLEMENT SYSTEMS ACT, 2007 (NO.51 OF 2007) (4) THE NATIONAL JUTE BOARD ACT, 2008 (NO.12 OF 2009) (5) THE NATIONAL GREEN TRIBUNAL ACT, 2010 (NO.19 OF 2010) (6) THE RIGHT TO FAIR COMPENSATION AND TRANSPARENCY IN LAND ACQUISITION, REHABILITATION AND RESETTLEMENT ACT, 2013 (NO.30 OF 2013) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

# ಸಂದಾಯ ಮತ್ತು ಇತ್ಯರ್ಥ ವ್ಯವಸ್ಥೆ ಅಧಿನಿಯಮ, 2007

## (2007ರ ಸಂಖ್ಯೆ 51)

[20ನೇ ಡಿಸೆಂಬರ್, 2007.]

ಭಾರತದಲ್ಲಿ ಸಂದಾಯ ವ್ಯವಸ್ಥೆಯನ್ನು ವಿನಿಯಮಿಸುವುದಕ್ಕಾಗಿ ಮತ್ತು ಮೇಲ್ವಿಚಾರಣೆ ಮಾಡುವುದಕ್ಕಾಗಿ ಮತ್ತು ಭಾರತ ರಿಸರ್ವ್ ಬ್ಯಾಂಕನ್ನು ಆ ಉದ್ದೇಶಕ್ಕಾಗಿ ಪ್ರಾಧಿಕಾರವೆಂದು ಹೆಸರಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಸಂದಾಯ ಮತ್ತು ಇತ್ಯರ್ಥ ವ್ಯವಸ್ಥೆ ಅಧಿನಿಯಮ, 2007 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಅಂಥ ಯಾವುದೇ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧದ ಪ್ರಾರಂಭಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಬ್ಯಾಂಕ್" ಎಂದರೆ:–

(i) ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934 ರ 2) ರ ಎರಡನೇ ಅನುಸೂಚಿಯಲ್ಲಿ ಸೇರಿಸಿರುವ ಒಂದು ಬ್ಯಾಂಕ್;

(ii) ಅಂಚೆ ಕಚೇರಿ ಉಳಿತಾಯ ಬ್ಯಾಂಕ್;

(iii) ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949ರ (1949ರ 10) ಪ್ರಕರಣ 5ರ (ಸಿ) ಖಂಡದಲ್ಲಿ ಪರಿಭಾಷಿಸಿರುವ ಬ್ಯಾಂಕಿಂಗ್ ಕಂಪನಿ;

---

* ಆಗಸ್ಟ್ 12, 2008 ರಂದು ಜಾರಿಗೆ ಬಂದಿದೆ. ಅಧಿಸೂಚನೆಯ ಸಂಖ್ಯೆ ಎಸ್.ಓ.2032 (ಇ) ಭಾರತ ವಿಶೇಷ ರಾಜಪತ್ರ, ಭಾಗ II ಪ್ರಕರಣ 3(ii).

(iv) ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949ರ (1949ರ 10) ಪ್ರಕರಣ 56ರ ಮೂಲಕ ಸೇರಿಸಲಾದ ಆ ಅಧಿನಿಯಮದ ಪ್ರಕರಣ 5ರ (ಸಿಸಿi) ಖಂಡದಲ್ಲಿ ಪರಿಭಾಷಿಸಿದ ಸಹಕಾರಿ ಬ್ಯಾಂಕ್; ಮತ್ತು

(v) ಈ ಅಧಿನಿಯಮದ ಉದ್ದೇಶಗಳಿಗಾಗಿ ರಿಸರ್ವ್ ಬ್ಯಾಂಕ್ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಬ್ಯಾಂಕ್;

(ಬಿ) "ಉತ್ಪಾದಿತ ವಸ್ತು" ಎಂದರೆ, ಭವಿಷ್ಯತ್ ದಿನಾಂಕದಲ್ಲಿ ಇತ್ಯರ್ಥ ಮಾಡಬೇಕಾದ ಯಾವ ಲಿಖಿತ ಪತ್ರದ ಮೌಲ್ಯವು ಬಡ್ಡಿಯ ದರದಲ್ಲಿ, ವಿದೇಶಿ ವಿನಿಮಯ ದರದಲ್ಲಿ, ಕ್ರೆಡಿಟ್ ರೇಟಿಂಗ್‌ನಲ್ಲಿ ಅಥವಾ ಕ್ರೆಡಿಟ್ ಸೂಚ್ಯಂಕದಲ್ಲಿ, ಭದ್ರತೆಗಳ ಬೆಲೆಯಲ್ಲಿ, (ಇದನ್ನು "ಅಂತರನಿಹಿತ" ಬೆಲೆ ಎಂದು ಕರೆಯಲಾಗಿದೆ) ಅಥವಾ ಯಾವುದೇ ಇತರ ಅಂತರನಿಹಿತ ಬೆಲೆಯಲ್ಲಿ ಆಗುವ ಬದಲಾವಣೆಯಿಂದ ಅಥವಾ ಅವುಗಳಲ್ಲಿ ಒಂದಕ್ಕಿಂತ ಹೆಚ್ಚಿನವುಗಳ ಸಂಯೋಜನೆಯಿಂದ ಪ್ರಾಪ್ತವಾಗುವ ಉತ್ಪತ್ತಿ ಮತ್ತು ಅದು ಬಡ್ಡಿದರದ ವಿನಿಮಯದಿಂದ, ವಾಯಿದೆ ದರ ಒಪ್ಪಂದಗಳಿಂದ, ವಿದೇಶಿ ಕರೆನ್ಸಿಯ ವಿನಿಮಯದಿಂದ, ವಿದೇಶಿ ಕರೆನ್ಸಿ ರೂಪಾಯಿ ವಿನಿಮಯದಿಂದ ವಿದೇಶಿ ಕರೆನ್ಸಿ ಆಯ್ಕೆಗಳಿಂದ, ವಿದೇಶಿ ಕರೆನ್ಸಿ ರೂಪಾಯಿ ಆಯ್ಕೆಗಳಿಂದ ಅಥವಾ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಲಿಖಿತ ಪತ್ರದಿಂದ ಪ್ರಾಪ್ತವಾಗುವ ಉತ್ಪತ್ತಿಯನ್ನು ಒಳಗೊಳ್ಳುತ್ತದೆ;

(ಸಿ) "ವಿದ್ಯುನ್ಮಾನದ ಮೂಲಕ ನಿಧಿ ವರ್ಗಾವಣೆ" ಎಂದರೆ, ಬ್ಯಾಂಕಿನಲ್ಲಿ ನಿರ್ವಹಿಸಿರುವ ಖಾತೆಯಿಂದ ಹಣವನ್ನು ವಿದ್ಯುನ್ಮಾನ ವಿಧಾನದಿಂದ ತೆಗೆಯಲು ಅಥವಾ ಆ ಖಾತೆಗೆ ಜಮೆ ಮಾಡಲು ವ್ಯಕ್ತಿಯು ಆ ಬ್ಯಾಂಕಿಗೆ ಸೂಚನೆ ನೀಡುವ, ಅಧಿಕಾರ ನೀಡುವ ಅಥವಾ ಆದೇಶ ನೀಡುವ ಮೂಲಕ ಅವನು ಯಾವ ನಿಧಿಗಳ ವರ್ಗಾವಣೆಗೆ ತೊಡಗುವವನೋ ಆ ಯಾವುದೇ ನಿಧಿಗಳ ವರ್ಗಾವಣೆ ಮತ್ತು ಇದರಲ್ಲಿ ಮಾರಾಟ ವರ್ಗಾವಣೆಗಳ ಸ್ಥಳ, ಆಟೋಮೆಟಿಕ್ ಟೆಲ್ಲರ್ ಮೆಷಿನ್ ವ್ಯವಹಾರಗಳು, ನಿಧಿಗಳನ್ನು ನೇರವಾಗಿ ಠೇವಣಿ ಇಡುವುದು ಅಥವಾ ಹಿಂತೆಗೆದುಕೊಳ್ಳುವುದು, ದೂರವಾಣಿ ಮೂಲಕ, ಅಂತರ್‌ಜಾಲ ಮೂಲಕ ಮತ್ತು ಕಾರ್ಡ್ ಮೂಲಕ ಸಂದಾಯ ಮಾಡುವ ವರ್ಗಾವಣೆಗಳು ಒಳಗೊಳ್ಳುತ್ತವೆ;

(ಡಿ) "ಒಟ್ಟು" ಇತ್ಯರ್ಥ ವ್ಯವಸ್ಥೆ" ಎಂದರೆ, ಯಾವ ಸಂದಾಯ ವ್ಯವಸ್ಥೆಯಲ್ಲಿ ಪ್ರತ್ಯೇಕ ಅಥವಾ ವೈಯಕ್ತಿಕ ಸೂಚನೆಗಳ ಆಧಾರದ ಮೇಲೆ ನಿಧಿಗಳಲ್ಲಿ ಅಥವಾ ಭದ್ರತೆಗಳಲ್ಲಿ ಪ್ರತಿಯೊಂದನ್ನು ಇತ್ಯರ್ಥ ಮಾಡಲಾಗುತ್ತದೋ ಆ ಸಂದಾಯ ವ್ಯವಸ್ಥೆ;

(ಡಿಎ) "ನೀಡಿಕೆದಾರ" ಎಂದರೆ, ಯಾವ ವ್ಯಕ್ತಿಯು, ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ ಕಾನೂನುಸಮ್ಮತ ಅಸ್ತಿತ್ವದ ಗುರುತಿನ ಸಾಧನವನ್ನು ಅಥವಾ (ಯಾವುದೇ ಹೆಸರಿನಿಂದ ಕರೆದಿರುವ) ಅಂಥ ಇತರ ವಿಶಿಷ್ಟ ಗುರುತನ್ನು ನೀಡುವನೋ ಆ ವ್ಯಕ್ತಿ;

(ಡಿಬಿ) "ಕಾನೂನುಸಮ್ಮತ ಅಸ್ತಿತ್ವದ ಗುರುತಿನ ಕಾರ್ಡ್" ಎಂದರೆ, ಯಾವ ವ್ಯಕ್ತಿಗೆ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ ಮೂಲತಃ ಇರುವ ಅಂಥ ಉತ್ಪಾದಿತ ವಸ್ತುಗಳ ಅಥವಾ ಹಣಕಾಸಿನ ವ್ಯವಹಾರಗಳ ನಿಮಿತ್ತ ಆ ವ್ಯಕ್ತಿಯನ್ನು ಗುರುತಿಸುವ ಉದ್ದೇಶಕ್ಕಾಗಿ ನೀಡಿಕೆದಾರನು ಆ ವ್ಯಕ್ತಿಗಾಗಿ ನಿಗದಿಪಡಿಸಿದ ವಿಶಿಷ್ಟ ಗುರುತಿನ ಸಂಕೇತ;

(ಇ) "ನಿವ್ವಳೀಕರಣ" ಎಂದರೆ, ವ್ಯವಸ್ಥೆಗೆ ಭಾಗೀದಾರನಾಗಿರುವ ಯಾರೇ ವ್ಯಕ್ತಿಯಿಂದ, ಅವನು ದಿವಾಳಿಯಾದಾಗ ಅಥವಾ ಆ ವ್ಯವಸ್ಥೆಯನ್ನು ವಿಸರ್ಜಿಸಿದಾಗ ಅಥವಾ ಸಮಾಪನಗೊಳಿಸಿದಾಗ ಅಥವಾ ಒಪ್ಪಿಕೊಳ್ಳಲು ಆಸ್ಪದವಾಗುವಂತೆ ನಿವ್ವಳ ಕ್ಲೇಮನ್ನು ಮಾತ್ರವೇ ತಗಾದೆ ಮಾಡಲು ಅಥವಾ ನಿವ್ವಳ ಹೊಣೆಗಾರಿಕೆಯನ್ನು ಮಾತ್ರವೇ ತನ್ನದೆಂದು ಒಪ್ಪಿಕೊಳ್ಳಲು ಆಸ್ಪದವಾಗುವಂತೆ ಮಾಡುವುದಕ್ಕಾಗಿ ವ್ಯವಸ್ಥೆಗೆ ಭಾಗೀದಾರನಾಗಿರುವ ವ್ಯಕ್ತಿಯು ತನ್ನ ಭವಿಷ್ಯತ್ ದಿನಾಂಕದಲ್ಲಿ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಒಪ್ಪಿಕೊಂಡಿರುವ ವ್ಯವಹಾರಗಳಿಗೆ ಸಂಬಂಧಿಸಿದ ನಿಯಮಗಳಲ್ಲಿ ಅಥವಾ ವಿನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ (ಅದನ್ನು ಯಾವುದೇ ಹೆಸರಿನಿಂದ ಕರೆದಿರಲಿ) ನಿರ್ದಿಷ್ಟವಾಗಿ ಹೇಳಿರಬಹುದಾದಂಥ ಇತರ ಸನ್ನಿವೇಶಗಳಲ್ಲಿ ವ್ಯವಸ್ಥೆ ಏರ್ಪಾಡುದಾರನು ವ್ಯವಸ್ಥೆಯನ್ನು ಸಮಾಪನಗೊಳಿಸುವುದರಿಂದಾಗಿ ಉದ್ಭವಿಸಬಹುದಾದಂಥ ಕ್ಲೇಮುಗಳು ಮತ್ತು ಬಾಧ್ಯತೆಗಳು ಸೇರಿದಂತೆ ವ್ಯವಸ್ಥೆಗೆ ಭಾಗೀದಾರರ ನಡುವಣ ಸಂದಾಯದ ಬಾಧ್ಯತೆಗಳನ್ನು ಅಥವಾ ನೀಡಿಕೆ ಬಾಧ್ಯತೆಗಳನ್ನು ವಜಾವಟ್ಟು ಮಾಡಿದ ಅಥವಾ ಹೊಂದಾಣಿಕೆ ಮಾಡಿದ ಕಾರಣದಿಂದಾಗಿ ಬಾಕಿಯಿರುವ ಅಥವಾ ಸಂದಾಯ ಮಾಡಬೇಕಾಗಿರುವ ಅಥವಾ ನೀಡಬೇಕಾಗಿರುವ ಹಣದ ಅಥವಾ ಭದ್ರತಾ ಪತ್ರಗಳ ಮೊಬಲಗಿನ ನಿರ್ಧರಣೆ;

(ಎಫ್) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಜಿ) "ಸಂದಾಯದ ಸೂಚನೆ" ಎಂದರೆ:–

(i) ವ್ಯಕ್ತಿಯು, ವ್ಯವಸ್ಥೆಗೆ ಭಾಗೀದಾರನಾಗಿರುವವನಿಗೆ; ಅಥವಾ

(ii) ವ್ಯವಸ್ಥೆಗೆ ಭಾಗೀದಾರನಾಗಿರುವವನು ವ್ಯವಸ್ಥೆಗೆ ಭಾಗೀದಾರನಾಗಿರುವ ಮತ್ತೊಬ್ಬನಿಗೆ

– ಸಂದಾಯ ಮಾಡುವಂತೆ ವಿದ್ಯುನ್ಮಾನ ಮಾಧ್ಯಮವೂ ಸೇರಿದಂತೆ ಯಾವುದೇ ರೂಪದಲ್ಲಿ ನೀಡುವ ಯಾವುದೇ ಲಿಖಿತ ಅಥವಾ ಅಧಿಕಾರ ಅಥವಾ ಆದೇಶ;

(ಹೆಚ್) "ಸಂದಾಯ ಬಾಧ್ಯತೆ" ಎಂದರೆ, ನಿಧಿಗಳಿಗೆ, ಭದ್ರತಾ ಪತ್ರಗಳಿಗೆ ಅಥವಾ ವಿದೇಶಿ ವಿನಿಮಯಕ್ಕೆ ಅಥವಾ ಉತ್ಪಾದಿತ ವಸ್ತುಗಳಿಗೆ ಅಥವಾ ಇತರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಒಂದು ಅಥವಾ ಹೆಚ್ಚು ಸಂದಾಯ ಸೂಚನೆಗಳನ್ನು ಪಾಲಿಸಿದ ಅಥವಾ ಇತ್ಯರ್ಥ ಮಾಡಿದ ಕಾರಣದಿಂದಾಗಿ ಅಂಥ ವ್ಯವಸ್ಥೆಗೆ ಭಾಗೀದಾರನಾಗಿರುವ ಒಬ್ಬ ವ್ಯಕ್ತಿಯು ವ್ಯವಸ್ಥೆಗೆ ಭಾಗೀದಾರನಾಗಿರುವ ಮತ್ತೊಬ್ಬ ವ್ಯಕ್ತಿಗೆ ತಾನು ಕೊಡಬೇಕಾಗಿದೆ ಎಂದು ಒಪ್ಪಿಕೊಂಡ ಋಣ;

(ಐ) "ಸಂದಾಯ ವ್ಯವಸ್ಥೆ" ಎಂದರೆ, ತೀರುವೆ, ಸಂದಾಯ ಅಥವಾ ಇತ್ಯರ್ಥ ಸೇವೆ ಅಥವಾ ಅವುಗಳೆಲ್ಲವೂ ಒಳಗೊಂಡಂತೆ, ಸಂದಾಯ ಮಾಡುವವನ ಮತ್ತು ಫಲಾನುಭವಿಯ ನಡುವೆ ಸಂದಾಯ ಆಗುವುದಕ್ಕೆ ಸಾಧ್ಯಮಾಡಿಕೊಡುವ ವ್ಯವಸ್ಥೆ, ಆದರೆ ಇದರಲ್ಲಿ ಸ್ಟಾಕ್ ಎಕ್ಸ್ಚೇಂಜ್ ಒಳಗೊಳ್ಳುವುದಿಲ್ಲ;

**ವಿವರಣೆ.–** ಈ ಖಂಡದ ಉದ್ದೇಶಗಳಿಗಾಗಿ, "ಸಂದಾಯ ವ್ಯವಸ್ಥೆಯಲ್ಲಿ" ಕ್ರೆಡಿಟ್ ಕಾರ್ಡ್ ವಹಿವಾಟುಗಳಿಗೆ, ಡೆಬಿಟ್ ಕಾರ್ಡ್ ವಹಿವಾಟುಗಳಿಗೆ, ಸ್ಮಾರ್ಟ್ ಕಾರ್ಡ್ ವಹಿವಾಟುಗಳಿಗೆ, ಹಣ ವರ್ಗಾವಣೆ ವಹಿವಾಟುಗಳಿಗೆ, ಅಥವಾ ಅದೇ ಬಗೆಯ ವಹಿವಾಟುಗಳಿಗೆ ಅನುವು ಮಾಡಿಕೊಡುವ ವ್ಯವಸ್ಥೆಗಳು ಒಳಗೊಳ್ಳುತ್ತವೆ;

(ಜೆ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಮೂಲಕ ನಿಯಮಿಸಲಾದುದು;

(ಕೆ) "ವಿನಿಯಮ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮ;

(ಎಲ್) "ರಿಸರ್ವ್ ಬ್ಯಾಂಕ್" ಎಂದರೆ, ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2)ರ ಮೇರೆಗೆ ರಚಿತವಾದ ಭಾರತ ರಿಸರ್ವ್ ಬ್ಯಾಂಕ್;

(ಎಂ) "ಭದ್ರತಾ ಪತ್ರಗಳು" ಎಂದರೆ, ಸಾರ್ವಜನಿಕ ಋಣ ಅಧಿನಿಯಮ, 1944 (1944ರ 18) ರಲ್ಲಿ ಪರಿಭಾಷಿಸಿರುವ ಸರ್ಕಾರಿ ಭದ್ರತಾ ಪತ್ರಗಳು ಅಥವಾ ಆ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಇತರ ಭದತಾ ಪತ್ರಗಳು;

(ಎನ್) "ಇತ್ಯರ್ಥ" ಎಂದರೆ, ಸಂದಾಯ ಸೂಚನೆಗಳ ಇತ್ಯರ್ಥ ಮತ್ತು ಇದರಲ್ಲಿ ಭದ್ರತಾ ಪತ್ರಗಳ, ವಿದೇಶಿ ವಿನಿಮಯದ ಅಥವಾ ಉತ್ಪಾದಿತ ವಸ್ತುಗಳ ಅಥವಾ ಯಾವ ವ್ಯವಹಾರಗಳಲ್ಲಿ ಸಂದಾಯ ಬಾಧ್ಯತೆಗಳೂ ಒಳಗೊಂಡಿರುತ್ತವೋ ಆ ಇತರ ವ್ಯವಹಾರಗಳ ಇತ್ಯರ್ಥವೂ ಸೇರುತ್ತದೆ;

(ಒ) "ಇಡೀ ವ್ಯವಸ್ಥೆಗೆ ಹಾನಿ" ಎಂದರೆ:–

(i) ವ್ಯವಸ್ಥೆಗೆ ಭಾಗೀದಾರನಾಗಿರುವವನು ಸಂದಾಯ ವ್ಯವಸ್ಥೆ ಮೇರೆಗೆ ತನ್ನ ಸಂದಾಯ ಬಾಧ್ಯತೆಗಳನ್ನು ಈಡೇರಿಸಬೇಕಾದಾಗಲೆಲ್ಲ ಈಡೇರಿಸಲು ಅವನು ಅಸಮರ್ಥನಾಗುವುದರಿಂದ; ಅಥವಾ

(ii) ವ್ಯವಸ್ಥೆಯಲ್ಲಿನ ಯಾವುದೇ ಅಡ್ಡಿ ಅಡಚಣೆಯಿಂದ

– ಇತರ ಭಾಗೀದಾರರು ತಮ್ಮ ಬಾಧ್ಯತೆಗಳನ್ನು ಈಡೇರಿಸಬೇಕಾದಾಗ ಈಡೇರಿಸಲು ವಿಫಲರಾಗುವುದಕ್ಕೆ ಆಸ್ಪದ ಕೊಡುವ ಮತ್ತು ವ್ಯವಸ್ಥೆಯ ಸ್ಥಿರತೆಯ ಮೇಲೆ ಪರಿಣಾಮ ಬೀರುವ ಸಂಭವವಿರುವ ಕಾರಣದಿಂದಾಗಿ ಉಂಟಾಗುವಂಥ ಹಾನಿ:

ಪರಂತು, ಒಂದು ನಿರ್ದಿಷ್ಟ ಹಾನಿಯು ವ್ಯವಸ್ಥೆಯ ಸ್ಥಿರತೆಯ ಮೇಲೆ ಪರಿಣಾಮ ಬೀರುವ ಸಂಭವವಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಯಾವುದೇ ಸಂದೇಹ ಅಥವಾ ಭಿನ್ನಾಭಿಪ್ರಾಯ ಉಂಟಾದರೆ, ರಿಸರ್ವ್ ಬ್ಯಾಂಕಿನ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು;

(ಪಿ) "ವ್ಯವಸ್ಥೆಗೆ ಭಾಗೀದಾರ" ಎಂದರೆ, ಸಂದಾಯ ವ್ಯವಸ್ಥೆಯಲ್ಲಿ ಭಾಗಿಯಾಗುವ ಬ್ಯಾಂಕ್ ಅಥವಾ ಯಾರೇ ಇತರ ವ್ಯಕ್ತಿ ಮತ್ತು ಇದರಲ್ಲಿ ವ್ಯವಸ್ಥೆ ಏರ್ಪಾಡುದಾರನು ಒಳಗೊಳ್ಳುತ್ತಾನೆ;

(ಕ್ಯೂ) "ವ್ಯವಸ್ಥೆ ಏರ್ಪಾಡುದಾರ" ಎಂದರೆ, ಯಾವ ವ್ಯಕ್ತಿಯು ಅಧಿಕೃತ ಸಂದಾಯ ವ್ಯವಸ್ಥೆಯನ್ನು ನಿರ್ವಹಿಸುವನೋ ಆ ವ್ಯಕ್ತಿ;

(ಆರ್) "ವ್ಯಾಪಾರ ಭಂಡಾರಿ" ಎಂದರೆ, ಯಾವ ವ್ಯಕ್ತಿಯು, ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ, ಮೂಲತಃ ಇರುವ ಉತ್ಪಾದಿತ ವಸ್ತುಗಳಿಗೆ ಅಂಥ ಅಥವಾ ಹಣಕಾಸು ವ್ಯವಹಾರಗಳಿಗೆ

ಸಂಬಂಧಿಸಿದಂತೆ ವಿದ್ಯುನ್ಮಾನ ದಾಖಲೆಗಳನ್ನು ಅಥವಾ ದತ್ತಾಂಶವನ್ನು ಸಂಗ್ರಹಿಸುವ, ತಾಳೆ ನೋಡುವ, ದಾಸ್ತಾನು ಮಾಡುವ, ನಿರ್ವಹಿಸುವ, ಕ್ರಮ ಜರುಗಿಸುವ ಅಥವಾ ಪ್ರಸಾರ ಮಾಡುವ ವ್ಯವಹಾರದಲ್ಲಿ ತೊಡಗಿರುವನೋ ಆ ಯಾರೇ ವ್ಯಕ್ತಿ.

(2) ಈ ಅಧಿನಿಯಮದಲ್ಲಿ ಬಳಸಿರುವ ಆದರೆ ಪರಿಭಾಷಿಸಿರದ ಮತ್ತು ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2) ರಲ್ಲಿ ಅಥವಾ ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949 (1949ರ 10)ರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು, ಆ ಅಧಿನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ II

## ನಿಯೋಜಿತ ಪ್ರಾಧಿಕಾರ

**3. ನಿಯೋಜಿತ ಪ್ರಾಧಿಕಾರ.–** (1) ಈ ಅಧಿನಿಯಮದ ಮೇರೆಗೆ ಸಂದಾಯದ ವ್ಯವಸ್ಥೆಗಳನ್ನು ವಿನಿಯಮಿಸುವುದಕ್ಕಾಗಿ ಮತ್ತು ಮೇಲ್ವಿಚಾರಣೆ ಮಾಡುವುದಕ್ಕಾಗಿ ರಿಸರ್ವ್ ಬ್ಯಾಂಕ್ ನಿಯೋಜಿತ ಪ್ರಾಧಿಕಾರವಾಗಿರತಕ್ಕದ್ದು.

(2) ರಿಸರ್ವ್ ಬ್ಯಾಂಕ್, "ಸಂದಾಯ ನಿಯಂತ್ರಣ ಮಂಡಲಿ" ಎಂದು ಕರೆಯಲಾಗುವ ಮಂಡಲಿಯ ಮೂಲಕ ಈ ಅಧಿನಿಯಮದ ಮೇರೆಗೆ ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು. ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಹಾಗೂ ಕರ್ತವ್ಯಗಳನ್ನು ನೇರವೇರಿಸತಕ್ಕದ್ದು.

(3) ಮಂಡಳಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ರಿಸರ್ವ್ ಬ್ಯಾಂಕಿನ ಗವರ್ನರ್– ಅಧ್ಯಕ್ಷರು, ಪದನಿಮಿತ್ತ;

(ಬಿ) ರಿಸರ್ವ್ ಬ್ಯಾಂಕಿನ ಡೆಪ್ಯೂಟಿ ಗವರ್ನರ್, ಸಂದಾಯ ಮತ್ತು ಇತ್ಯರ್ಥ ವ್ಯವಸ್ಥೆಗಳ ಪ್ರಭಾರದಲ್ಲಿರುವ ಸದಸ್ಯ, ಪದನಿಮಿತ್ತ;

(ಸಿ) ರಿಸರ್ವ್ ಬ್ಯಾಂಕ್‌ನ ಕೇಂದ್ರ ಮಂಡಲಿಯು ನಾಮನಿರ್ದೇನ ಮಾಡುವ ರಿಸರ್ವ್ ಬ್ಯಾಂಕಿನ ಒಬ್ಬ ಅಧಿಕಾರಿ, ಸದಸ್ಯ, ಪದನಿಮಿತ್ತ; ಮತ್ತು

(ಡಿ) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ಮೂವರು ವ್ಯಕ್ತಿಗಳು– ಸದಸ್ಯರು.

(4) ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು, ಅದರ ಸಭೆಗಳು ನಡೆಯುವ ಕಾಲ ಮತ್ತು ಸ್ಥಳ, ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವು, (ಅಂಥ ಸಭೆಗಳಲ್ಲಿ ಕೋರಂ ಸೇರಿದಂತೆ) ಮತ್ತು ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ III

## ಸಂದಾಯ ವ್ಯವಸ್ಥೆಗಳಿಗೆ ಅಧಿಕಾರ ನೀಡಿಕೆ

**4. ಅಧಿಕಾರ ಇಲ್ಲದೆಯೇ ಸಂದಾಯ ವ್ಯವಸ್ಥೆಯನ್ನು ನಿರ್ವಹಿಸದಿರುವುದು.–** (1) ರಿಸರ್ವ್ ಬ್ಯಾಂಕಿನ ಹೊರತು ಯಾರೇ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ರಿಸರ್ವ್ ಬ್ಯಾಂಕ್ ಅಧಿಕಾರ ನೀಡಿದ್ದ ಹೊರತು, ಸಂದಾಯ ವ್ಯವಸ್ಥೆಯನ್ನು ಪ್ರಾರಂಭಿಸತಕ್ಕದ್ದಲ್ಲ ಅಥವಾ ಅದನ್ನು ನಿರ್ವಹಿಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ,–

(ಎ) ಈ ಅಧಿನಿಯಮವು ಪ್ರಾರಂಭವಾದಾಗ ಅಸ್ತಿತ್ವದಲ್ಲಿರುವ ಸಂದಾಯ ವ್ಯವಸ್ಥೆಯ ಪ್ರವರ್ತನೆಯು, ಅಂಥ ಸಂದಾಯ ವ್ಯವಸ್ಥೆಯ ಪ್ರವರ್ತಕನು ಅಂಥ ಪ್ರಾರಂಭದಿಂದ ಆರು ತಿಂಗಳನ್ನು ಮೀರದ ಅವಧಿಗೆ, ಆ ಅವಧಿಯ ಒಳಗೆ ಈ ಅಧಿನಿಯಮದ ಮೇರೆಗೆ ಅಧಿಕಾರವನ್ನು ಪಡೆದಿದ್ದ ಹೊರತು ಅಥವಾ ಈ ಅಧಿನಿಯಮದ ಪ್ರಕರಣ 7ರ ಮೇರೆಗೆ ಅಧಿಕಾರ ಪಡೆಯುವುದಕ್ಕಾಗಿ ಸಲ್ಲಿಸಿದ್ದ ಅರ್ಜಿಯನ್ನು ರಿಸರ್ವ್ ಬ್ಯಾಂಕು ತಿರಸ್ಕರಿಸಿದ್ದ ಹೊರತು, ಮುಂದುವರಿದಿರುವುದಕ್ಕೆ;

(ಬಿ) ಯಾವ ಮತ್ತೊಬ್ಬ ವ್ಯಕ್ತಿಗೆ ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಯು ಯುಕ್ತವಾಗಿ ನೇಮಕ ಮಾಡಿದ ಏಜೆಂಟನಾಗಿ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಗೆ;

(ಸಿ) ತನ್ನದೇ ಆದ ಹಿಡುವಳಿ ಕಂಪನಿಯಿಂದಾಗಲಿ ಅಥವಾ ತನ್ನ ಸಹಾಯಕ ಕಂಪನಿಗಳಲ್ಲಿ ಯಾವುದರಿಂದಾಗಲಿ ಅಥವಾ ಯಾವ ಇತರ ಕಂಪನಿಯು ಅಂಥವುದೇ ಹಿಡುವಳಿ ಕಂಪನಿಯ ಸಹಾಯಕ ಕಂಪನಿ ಸಹ ಆಗಿರುವುದೋ ಆ ಯಾವುದೇ ಇತರ ಕಂಪನಿಯಿಂದ ಸಂದಾಯಗಳನ್ನು ಒಪ್ಪಿಕೊಳ್ಳುವ ಕಂಪನಿಗೆ;

(ಡಿ) ರಿಸರ್ವ್ ಬ್ಯಾಂಕ್, ಯಾವ ಇತರ ವ್ಯಕ್ತಿಗೆ, ಹಣಕಾಸು ನೀತಿಯ ಹಿತಾಸಕ್ತಿಗಳನ್ನು ಅಥವಾ ಸಂದಾಯ ವ್ಯವಸ್ಥೆಗಳ ದಕ್ಷ ಕಾರ್ಯಕ್ಷಮತೆಯನ್ನು ಹಾಗೂ ಯಾವುದೇ ಸಂದಾಯ ವ್ಯವಸ್ಥೆಯ ಗಾತ್ರವನ್ನು ಪರಿಗಣಿಸಿದ ತರುವಾಯ ಅಥವಾ ಯಾವುದೇ ಇತರ ಕಾರಣಕ್ಕಾಗಿ, ಅಧಿಸೂಚನೆಯ ಮೂಲಕ ಈ ಪ್ರಕರಣದ ಉಪಬಂಧಗಳ ಅನ್ವಯಕ್ಕೆ ವಿನಾಯಿತಿ ಕೊಡುವುದೋ ಆ ಯಾರೇ ಇತರ ವ್ಯಕ್ತಿಗೆ

– ಅನ್ವಯವಾಗತಕ್ಕದ್ದಲ್ಲ.

(2) ರಿಸರ್ವ್ ಬ್ಯಾಂಕ್, ಈ ಪ್ರಕರಣದ ಉಪಪ್ರಕರಣ (1)ರ ಮೇರೆಗೆ, ದೇಶದ ಎಲ್ಲ ಕಡೆ ಇರುವ ಬ್ಯಾಂಕುಗಳು ಕಾಮನ್ ರಿಟೈಲ್ ಕ್ಲಿಯರಿಂಗ್ ಹೌಸ್ ಸಿಸ್ಟಮ್ ಅನ್ನು ಹೊಂದುವ ನಿಟ್ಟಿನಲ್ಲಿ ಈಗಿರುವ ಕ್ಲಿಯರಿಂಗ್ ಹೌಸ್‌ಗಳನ್ನು ಅಥವಾ ಹೊಸ ಕ್ಲಿಯರಿಂಗ್ ಹೌಸ್‌ಗಳನ್ನು ಪ್ರವರ್ತಿಸಲು ಅಥವಾ ವಿನಿಯಮಿಸಲು ಕಂಪನಿಗೆ ಅಥವಾ ನಿಗಮಕ್ಕೆ ಅಧಿಕಾರ ನೀಡಬಹುದು:

ಪರಂತು, ಅಂಥ ಕಂಪನಿಯ ಅಥವಾ ನಿಗಮದ ಈಕ್ವಿಟಿಯಲ್ಲಿ ಶೇಕಡಾ ಐವತ್ತೊಂದರಷ್ಟಕ್ಕಿಂತ ಕಡಿಮೆಯಿರದ ಈಕ್ವಿಟಿಯನ್ನು, ಸಾರ್ವಜನಿಕ ವಲಯ ಬ್ಯಾಂಕುಗಳು ಧಾರಣ ಮಾಡಿರತಕ್ಕದ್ದು.

**ವಿವರಣೆ.–** ಈ ಖಂಡದ ಉದ್ದೇಶಗಳಿಗಾಗಿ, "ಸಾರ್ವಜನಿಕ ವಲಯ ಬ್ಯಾಂಕುಗಳಲ್ಲಿ, ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 (1949ರ 10)ರ ಪ್ರಕರಣ 5ರಲ್ಲಿ ಪರಿಭಾಷಿಸಿರುವ, "ಸಂವಾದಿ ಹೊಸ ಬ್ಯಾಂಕ್", "ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ" ಮತ್ತು "ಅವುಗಳ ಸಹಾಯಕ ಬ್ಯಾಂಕ್" ಒಳಗೊಳ್ಳತಕ್ಕದ್ದು.

**5. ಅಧಿಕಾರ ನೀಡಿಕೆಗಾಗಿ ಅರ್ಜಿ.–** (1) ಸಂದಾಯ ವ್ಯವಸ್ಥೆಯನ್ನು ಪ್ರಾರಂಭಿಸಲು ಮತ್ತು ನಿರ್ವಹಿಸಲು ಇಚ್ಛಿಸುವ ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಅಧಿಕಾರ ನೀಡಿಕೆಗಾಗಿ ರಿಸರ್ವ್ ಬ್ಯಾಂಕಿಗೆ ಅರ್ಜಿ ಸಲ್ಲಿಸಬಹುದು.

(2) ಉಪಪ್ರಕರಣ (1)ರ ಮೇರೆಗಿನ ಅರ್ಜಿಯನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅದರ ಜೊತೆಗೆ ಅಂಥ ಫೀಜುಗಳು ಇರತಕ್ಕದ್ದು.

**6. ರಿಸರ್ವ್ ಬ್ಯಾಂಕಿನಿಂದ ವಿಚಾರಣೆ.–** ಪ್ರಕರಣ 5ರ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಮತ್ತು ಈ ಅಧಿನಿಯಮದ ಮೇರೆಗೆ ಅಧಿಕಾರ ನೀಡುವುದಕ್ಕೆ ಮುಂಚೆ, ರಿಸರ್ವ್ ಬ್ಯಾಂಕ್, ಅರ್ಜಿದಾರನು ಒದಗಿಸಿದ ವಿವರಗಳ ನೈಜತೆ ಬಗ್ಗೆ, ಸಂದಾಯ ವ್ಯವಸ್ಥೆಯನ್ನು ನಿರ್ವಹಿಸಲು ಆತನ ಸಾಮರ್ಥ್ಯದ ಬಗ್ಗೆ, ಭಾಗೀದಾರರ ವಿಶ್ವಾಸಾರ್ಹತೆಯ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಅಥವಾ ಇತರ ಯಾವುದೇ ಕಾರಣಕ್ಕಾಗಿ ಅದು ಅವಶ್ಯಕವೆಂದು ಅದು ಪರಿಗಣಿಸಬಹುದಾದಂಥ ವಿಚಾರಣೆಗಳನ್ನು ಮಾಡಬಹುದು ಮತ್ತು ಅಂಥ ವಿಚಾರಣೆಯನ್ನು ಈ ಬಗ್ಗೆ ತಾನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ನಡೆಸಿದ್ದರೆ, ವಿಚಾರಣೆಯ ಸಂಬಂಧದಲ್ಲಿ ಅಂಥ ವ್ಯಕ್ತಿಯಿಂದ ವರದಿಯನ್ನು ಅದು ಅಗತ್ಯಪಡಿಸಬಹುದು.

**7. ಅಧಿಕಾರ ನೀಡಿಕೆ ಅಥವಾ ನಿರಾಕರಣೆ.–** (1) ರಿಸರ್ವ್ ಬ್ಯಾಂಕು, ಪ್ರಕರಣ 6ರ ಮೇರೆಗೆ ಯಾವುದೇ ವಿಚಾರಣೆಯನ್ನು ಮಾಡಿದ ತರುವಾಯ ಅಥವಾ ಅನ್ಯಥಾ, ಅರ್ಜಿಯು ಎಲ್ಲ ವಿಧದಲ್ಲಿಯೂ ಪೂರ್ಣವಾಗಿದೆಯೆಂದು ಮತ್ತು ಅದು ಈ ಅಧಿನಿಯಮದ ಮತ್ತು ವಿನಿಯಮಗಳ ಉಪಬಂಧಗಳಿಗೆ ಅನುಗುಣವಾಗಿದೆಯೆಂದು ಮನದಟ್ಟಾದರೆ, ಈ ಕೆಳಕಂಡ ಪರಿಗಣನೆಗಳಿಗೆ ಗಮನಕೊಟ್ಟು, ಎಂದರೆ:–

(i) ಪ್ರಸ್ತಾವಿತ ಸಂದಾಯ ವ್ಯವಸ್ಥೆಯ ಅವಶ್ಯಕತೆಗೆ ಅಥವಾ ಅದು ಕೈಗೊಳ್ಳಲು ಪ್ರಸ್ತಾವಿತ ಸೇವೆಗಳಿಗೆ;

(ii) ಪ್ರಸ್ತಾವಿತ ಸಂದಾಯ ವ್ಯವಸ್ಥೆಯ ತಾಂತ್ರಿಕ ಗುಣಮಟ್ಟಗಳಿಗೆ ಅಥವಾ ವಿನ್ಯಾಸಗಳಿಗೆ;

(iii) ಯಾವುದೇ ಸುರಕ್ಷಾ ಕಾರ್ಯವಿಧಾನವನ್ನು ಒಳಗೊಂಡ ಪ್ರಸ್ತಾವಿತ ಸಂದಾಯ ವ್ಯವಸ್ಥೆಯ ನಿರ್ವಹಣೆಯ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ;

(iv) ಸಂದಾಯ ವ್ಯವಸ್ಥೆಯಲ್ಲಿ ಯಾವ ರೀತಿಯಲ್ಲಿ ನಿಧಿಗಳನ್ನು ವರ್ಗಾವಣೆ ಮಾಡಬಹುದೋ ಆ ರೀತಿಗೆ;

(v) ಸಂದಾಯ ವ್ಯವಸ್ಥೆಯ ಮೇರೆಗೆ ಸಂದಾಯ ಬಾಧ್ಯತೆಗಳನ್ನು ಈಡೇರಿಸಲು ಸಂದಾಯ ಸೂಚನೆಗಳಿಗೆ ಸಂಬಂಧಿಸಿದಂತೆ ನಿವ್ವಳ ನಿರ್ಧರಣೆ ಪ್ರಕ್ರಿಯೆಗೆ;

(vi) ಅರ್ಜಿದಾರನ ಹಣಕಾಸು ಸ್ಥಿತಿಗತಿಯನ್ನು, ವ್ಯವಸ್ಥಾಪನಾ ಅನುಭವಕ್ಕೆ ಮತ್ತು ನೀತಿ ನಿಷ್ಠೆಗೆ;

(vii) ಸಂದಾಯ ವ್ಯವಸ್ಥೆಯನ್ನು ಏರ್ಪಾಡುದಾರರೊಂದಿಗೆ ಗ್ರಾಹಕರ ಸಂಬಂಧವನ್ನು ರೂಪಿಸುವುದಕ್ಕೆ, ಸಂಬಂಧಿಸಿದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಒಳಗೊಂಡಂತೆ ಗ್ರಾಹಕರ ಹಿತಾಸಕ್ತಿಗಳಿಗೆ;

(viii) ಹಣಕಾಸು ಮತ್ತು ಸಾಲ ನೀಡಿಕೆ ನೀತಿಗಳಿಗೆ; ಮತ್ತು

(ix) ರಿಸರ್ವ್ ಬ್ಯಾಂಕು ಸುಸಂಗತವೆಂದು ಪರಿಗಣಿಸಬಹುದಾದಂಥ ಇತರ ಸಂಗತಿಗಳಿಗೆ

– ಗಮನಕೊಟ್ಟು ಈ ಅಧಿನಿಯಮದ ಮೇರೆಗೆ ಸಂದಾಯ ವ್ಯವಸ್ಥೆಯನ್ನು ನಿರ್ವಹಿಸುವುದಕ್ಕಾಗಿ ಅಧಿಕಾರವನ್ನು ನೀಡಬಹುದು.

(2) ಉಪಪ್ರಕರಣ (1)ರ ಮೇರೆಗೆ ಅಧಿಕಾರ ನೀಡಿಕೆಯು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು; ಮತ್ತು,–

(ಎ) ಅದು ಯಾವ ದಿನಾಂಕದಂದು ಜಾರಿಗೆ ಬರುವುದೋ ಆ ದಿನಾಂಕವನ್ನು ತಿಳಿಸತಕ್ಕದ್ದು;

(ಬಿ) ಯಾವ ಷರತ್ತುಗಳಿಗೆ ಒಳಪಟ್ಟು ಅಧಿಕಾರ ನೀಡಿಕೆಯು ಜಾರಿಯಲ್ಲಿರತಕ್ಕದ್ದೋ ಆ ಷರತ್ತುಗಳನ್ನು ತಿಳಿಸತಕ್ಕದ್ದು;

(ಸಿ) ಅಧಿಕಾರ ನೀಡಿಕೆಯು ಜಾರಿಯಲ್ಲಿರುವುದಕ್ಕೆ ಯಾವುದಾದರೂ ಫೀಜನ್ನು ಸಂದಾಯ ಮಾಡಬೇಕಾಗಿದ್ದರೆ ಆ ಫೀಜಿನ ಸಂದಾಯಕ್ಕೆ ಸೂಚನೆ ಇರತಕ್ಕದ್ದು;

(ಡಿ) ಅವಶ್ಯಕವೆಂದು ಅದು ಪರಿಗಣಿಸಿದರೆ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಸಂದಾಯ ವ್ಯವಸ್ಥೆಯನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕಾಗಿ ಅರ್ಜಿದಾರನನ್ನು ಅಂಥ ಭದ್ರತೆಯನ್ನು ಒದಗಿಸಲು ಅಗತ್ಯಪಡಿಸತಕ್ಕದ್ದು;

(ಇ) ಅಧಿಕಾರ ನೀಡಿರುವುದನ್ನು ರದ್ದುಗೊಳಿಸುವವರೆಗೆ ಆ ಅಧಿಕಾರವು ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

(3) ಅಧಿಕಾರ ನೀಡಿಕೆಗಾಗಿ ಸಲ್ಲಿಸಿದ ಅರ್ಜಿಯನ್ನು ನಿರಾಕರಿಸತಕ್ಕದ್ದೆಂದು ರಿಸರ್ವ್ ಬ್ಯಾಂಕು, ಪರಿಗಣಿಸಿದರೆ ಅದು, ನಿರಾಕರಣೆಯ ಕಾರಣಗಳನ್ನು ತಿಳಿಸಿ ಆ ಬಗ್ಗೆ ಲಿಖಿತ ನೋಟೀಸನ್ನು ಅರ್ಜಿದಾರನಿಗೆ ಕೊಡತಕ್ಕದ್ದು:

ಪರಂತು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು, ಅಂಥ ಅರ್ಜಿಯನ್ನು ನಿರಾಕರಿಸತಕ್ಕದ್ದಲ್ಲ.

(4) ಅಧಿಕಾರ ನೀಡಿಕೆಗಾಗಿ ಸಲ್ಲಿಸಿದ ಪ್ರತಿಯೊಂದು ಅರ್ಜಿಯ ಬಗ್ಗೆ ರಿಸರ್ವ್ ಬ್ಯಾಂಕು, ಸಾಧ್ಯವಾದಷ್ಟು ಬೇಗನೆ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಅಂಥ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳುಗಳ ಒಳಗಾಗಿ ಅಂಥ ಅರ್ಜಿಯನ್ನು ವಿಲೆ ಮಾಡಲು ಪ್ರಯತ್ನ ಮಾಡತಕ್ಕದ್ದು.

**8. ಅಧಿಕಾರ ನೀಡಿಕೆಯ ರದ್ದಿಯಾತಿ.–** (1) ವ್ಯವಸ್ಥೆಯ ಏರ್ಪಾಡುದಾರನು,–

(i) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದರೆ; ಅಥವಾ

(ii) ವಿನಿಯಮಗಳನ್ನು ಪಾಲಿಸದಿದ್ದರೆ; ಅಥವಾ

(iii) ನಿಯೋಜಿತ ಪ್ರಾಧಿಕಾರವು ಹೊರಡಿಸಿದ ಆದೇಶಗಳನ್ನು ಅಥವಾ ನಿರ್ದೇಶನಗಳನ್ನು ಪಾಲಿಸಲು ವಿಫಲನಾದರೆ; ಅಥವಾ

(iv) ಸಂದಾಯ ವ್ಯವಸ್ಥೆಯು ಅಧಿಕಾರ ನೀಡಿಕೆಯ ಯಾವ ಷರತ್ತುಗಳಿಗೆ ಒಳಪಟ್ಟಿರುತ್ತದೋ ಆ ಷರತ್ತುಗಳಿಗೆ ತದ್ವಿರುದ್ಧವಾಗಿ ನಿರ್ಧರಣೆ ಮಾಡಿದರೆ

– ರಿಸರ್ವ್ ಬ್ಯಾಂಕು, ಆದೇಶದ ಮೂಲಕ, ಈ ಅಧಿನಿಯಮದ ಮೇರೆಗೆ ಅಂಥ ವ್ಯವಸ್ಥೆ ಏರ್ಪಾಡುದಾರನಿಗೆ ನೀಡಿದ ಅಧಿಕಾರವನ್ನು ರದ್ದುಗೊಳಿಸಬಹುದು:

ಪರಂತು, ಉಪಪ್ರಕರಣ (1)ರ ಮೇರೆಗಿನ ರದ್ದಿಯಾತಿಯ ಯಾವುದೇ ಆದೇಶವನ್ನು,–

(i) ವ್ಯವಸ್ಥೆ ಏರ್ಪಾಡುದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ತರುವಾಯ ಹೊರತು; ಮತ್ತು

(ii) ವ್ಯವಸ್ಥೆ ಏರ್ಪಾಡುದಾರನಿಗೆ ರಿಸರ್ವ್ ಬ್ಯಾಂಕು, ಸಂದಾಯ ವ್ಯವಸ್ಥೆಯ ನಿರ್ವಹಣೆಯನ್ನು ರದ್ದಿಯಾತಿ ಆದೇಶವನ್ನು ಹೊರಡಿಸುವವರೆಗೆ ನಿರ್ವಹಿಸತಕ್ಕದ್ದಲ್ಲವೆಂದು ವ್ಯವಸ್ಥೆ ಏರ್ಪಾಡುದಾರನಿಗೆ ನೀಡಿದ ನಿರ್ದೇಶನಕ್ಕೆ ಬಾಧಕವಾಗದಂತೆ

– ಮಾಡತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಒಳಗೊಂಡಿರುವುದು ಯಾವುದೂ, ರಿಸರ್ವ್ ಬ್ಯಾಂಕು, ಸಂದಾಯ ವ್ಯವಸ್ಥೆಗೆ ನೀಡಿದ್ದ ಅಧಿಕಾರವನ್ನು ದೇಶದ ಹಣಕಾಸು ನೀತಿಯ ಹಿತದೃಷ್ಟಿಯಿಂದ ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಬೇಕಾದ ಯಾವುದೇ ಇತರ ಕಾರಣಗಳಿಗಾಗಿ ರದ್ದುಗೊಳಿಸುವುದು ಆವಶ್ಯಕವೆಂದು ಅದು ಪರಿಗಣಿಸಿದಲ್ಲಿ, ಅಂಥ ಸಂದರ್ಭಕ್ಕೆ ಅನ್ವಯವಾಗತಕ್ಕದ್ದಲ್ಲ.

(3) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ರದ್ದಿಯಾತಿ ಆದೇಶವು, ಅಂಥ ರದ್ದಿಯಾತಿ ಆದೇಶದಿಂದ ಬಾಧಿತರಾಗುವ ವ್ಯಕ್ತಿಗಳ ಹಿತಾಸಕ್ತಿಗಳನ್ನು ಸಂರಕ್ಷಿಸಲು ಮತ್ತು ರಕ್ಷಣೆ ಮಾಡಲು ಅವಶ್ಯಕ ಉಪಬಂಧಗಳನ್ನು ಒಳಗೊಂಡಿರತಕ್ಕದ್ದು.

(4) ವ್ಯವಸ್ಥೆ ಏರ್ಪಾಡುದಾರನು ದಿವಾಳಿಯಾದಲ್ಲಿ ಅಥವಾ ಆ ವ್ಯವಸ್ಥೆಯನ್ನು ವಿಸರ್ಜಿಸಿದರೆ ಅಥವಾ ಪರಿಸಮಾಪನಗೊಳಿಸಿದರೆ, ಅಂಥ ವ್ಯವಸ್ಥೆ ಏರ್ಪಾಡುದಾರನು, ರಿಸರ್ವ್ ಬ್ಯಾಂಕಿಗೆ ಆ ವಾಸ್ತವಾಂಶವನ್ನು ತಿಳಿಸತಕ್ಕದ್ದು ಮತ್ತು ತದನಂತರ, ರಿಸರ್ವ್ ಬ್ಯಾಂಕು, ಸಂದಾಯ ವ್ಯವಸ್ಥೆಯನ್ನು ನಿರ್ವಹಿಸಲು ಅಂಥ ವ್ಯವಸ್ಥೆ ಏರ್ಪಾಡುದಾರನಿಗೆ ನೀಡಿದ ಅಧಿಕಾರವನ್ನು ರದ್ದುಗೊಳಿಸಲು ಅವಶ್ಯಕವೆಂದು ತಾನು ಭಾವಿಸುವಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**9. ಕೇಂದ್ರ ಸರ್ಕಾರಕ್ಕೆ ಅಪೀಲು.–** (1) ಸಂದಾಯ ವ್ಯವಸ್ಥೆಯನ್ನು ನಿರ್ವಹಿಸುವುದಕ್ಕಾಗಿ ಅಧಿಕಾರ ನೀಡಿಕೆಗೆ ಯಾವ ಅರ್ಜಿದಾರನು ಅರ್ಜಿಯನ್ನು ಸಲ್ಲಿಸಿರುವನೋ, ಆ ಅರ್ಜಿಯನ್ನು ಪ್ರಕರಣ 7ರ ಉಪಪ್ರಕರಣ (3)ರ ಮೇರೆಗೆ ತಿರಸ್ಕರಿಸಿದ್ದರೆ, ಅಥವಾ ವ್ಯವಸ್ಥೆಯನ್ನು ಯಾರು ಒದಗಿಸಿರುತ್ತಾನೋ ಅವನು, ಪ್ರಕರಣ 8ರ ಮೇರೆಗೆ ಅಧಿಕಾರ ನೀಡಿಕೆಯ ರದ್ದಿಯಾತಿ

ಆದೇಶದಿಂದ ಬಾಧಿತನಾಗಿದ್ದರೆ ಅವನು, ಆ ಆದೇಶವನ್ನು ಆ ವ್ಯವಸ್ಥೆ ಏರ್ಪಾಡುದಾರನಿಗೆ ಯಾವ ದಿನಾಂಕದಂದು ತಿಳಿಸಲಾಯಿತೋ, ಆ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಕೇಂದ್ರ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

(2) ಕೇಂದ್ರ ಸರ್ಕಾರವು, ಮೂರು ತಿಂಗಳ ಒಳಗಾಗಿ ಉಪಪ್ರಕರಣ (1)ರ ಮೇರೆಗೆ ಸಲ್ಲಿಸಿದ ಅಪೀಲನ್ನು ವಿಲೆ ಮಾಡಲು ಪ್ರಯತ್ನಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ, ಅಪೀಲಿನ ಮೇಲೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

## ಅಧ್ಯಾಯ IV

## ರಿಸರ್ವ್ ಬ್ಯಾಂಕಿನಿಂದ ವಿನಿಯಮ ಮತ್ತು ಮೇಲ್ವಿಚಾರಣೆ

**10. ಮಾನಕಗಳನ್ನು ನಿರ್ಧರಿಸಲು ಅಧಿಕಾರ.–** (1) ರಿಸರ್ವ್ ಬ್ಯಾಂಕಿನಿಂದ, ಕಾಲಕಾಲಕ್ಕೆ,–

(ಎ) ಸಂದಾಯ ಸೂಚನೆಗಳ ನಿದರ್ಶನ ನಮೂನೆಯನ್ನು ಮತ್ತು ಅಂಥ ಸೂಚನೆಗಳ ಗಾತ್ರ ಮತ್ತು ಸ್ವರೂಪವನ್ನು;

(ಬಿ) ಸಂದಾಯ ವ್ಯವಸ್ಥೆಗಳಲ್ಲಿ ಪಾಲಿಸಬೇಕಾದ ವೇಳೆಗಳನ್ನು;

(ಸಿ) ಬ್ಯಾಂಕುಗಳ ನಡುವೆ ಅಥವಾ ಬ್ಯಾಂಕು ಮತ್ತು ಇತರ ಸಂದಾಯ ಭಾಗೀದಾರರ ನಡುವೆ ಕಾಗದ ಪತ್ರದ ಮುಖಾಂತರವಾಗಿಯಾಗಲಿ, ವಿದ್ಯುನ್ಮಾನ ಸಾಧನದ ಮೂಲಕವಾಗಿಯಾಗಲಿ ಅಥವಾ ಯಾವುದೇ ಇತರ ರೀತಿಯಲ್ಲಾಗಲಿ, ಸಂದಾಯ ವ್ಯವಸ್ಥೆಯೊಳಗೆ ನಿಧಿಗಳ ವರ್ಗಾವಣೆಯ ರೀತಿಯನ್ನು;

(ಡಿ) ಸಾಮಾನ್ಯವಾಗಿ ಸಂದಾಯ ವ್ಯವಸ್ಥೆಗಳ ಜೊತೆಗೆ ಪಾಲಿಸಬೇಕಾದಂಥ ಇತರ ಮಾನಕಗಳನ್ನು;

(ಇ) ಸದಸ್ಯತ್ವದ ಮುಂದುವರಿಕೆ, ಮುಕ್ತಾಯ ಮತ್ತು ರದ್ದಿಯಾತಿಯು ಒಳಗೊಂಡಂತೆ ಸಂದಾಯ ವ್ಯವಸ್ಥೆಯ ಸದಸ್ಯತ್ವಕ್ಕಾಗಿ ಮಾನದಂಡವನ್ನು;

(ಎಫ್) ಯಾವ ಷರತ್ತುಗಳಿಗೆ ಒಳಪಟ್ಟು, ವ್ಯವಸ್ಥೆ ಭಾಗೀದಾರರು ಅಂಥ ನಿಧಿ ವರ್ಗಾವಣೆಗಳಲ್ಲಿ ಭಾಗವಹಿಸತಕ್ಕದ್ದೋ ಆ ಷರತ್ತುಗಳನ್ನು ಮತ್ತು ಅಂಥ ನಿಧಿಗಳಲ್ಲಿ ವ್ಯವಸ್ಥೆ ಭಾಗೀದಾರರ ಹಕ್ಕುಗಳನ್ನು ಮತ್ತು ಬಾಧ್ಯತೆಗಳನ್ನು

– ನಿಯಮಿಸಬಹುದು.

(2) ಉಪಪ್ರಕರಣ (1)ರ ಉಪಬಂಧಗಳಿಗೆ ಬಾಧಕವಾಗದಂತೆ, ರಿಸರ್ವ್ ಬ್ಯಾಂಕು, ಸಾಮಾನ್ಯವಾಗಿ ಸಂದಾಯ ವ್ಯವಸ್ಥೆಯ ಸೂಕ್ತ ಮತ್ತು ದಕ್ಷ ನಿರ್ವಹಣೆಗಾಗಿ ಅಥವಾ ಯಾವುದೇ ನಿರ್ದಿಷ್ಟ ಸಂದಾಯ ವ್ಯವಸ್ಥೆಗೆ ಸಂಬಂಧಿಸಿದಂತೆ ತಾನು ಅವಶ್ಯಕವೆಂದು ಪರಿಗಣಿಸಬಹುದಾದಂಥ ಮಾರ್ಗಸೂಚನೆಗಳನ್ನು ಕಾಲಕಾಲಕ್ಕೆ ಹೊರಡಿಸಬಹುದು.

**10ಎ. ಬ್ಯಾಂಕ್, ಇತ್ಯಾದಿಗಳು, ವಿದ್ಯುನ್ಮಾನ ಸಂದಾಯ ವಿಧಾನಗಳನ್ನು ಉಪಯೋಗಿಸುವುದಕ್ಕಾಗಿ ಶುಲ್ಕವನ್ನು ವಿಧಿಸಬಾರದು.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಆದಾಯ ತೆರಿಗೆ ಅಧಿನಿಯಮ, 1961 (1961 ರ 43)ರ

ಪ್ರಕರಣ 269ಎಸ್‌ಯು ನ ಮೇರೆಗೆ ನಿಯಮಿಸಲಾದ ವಿದ್ಯುನ್ಮಾನ ಸಂದಾಯ ವಿಧಾನಗಳನ್ನು ಉಪಯೋಗಿಸಿಕೊಂಡು ಸಂದಾಯ ಮಾಡುವ ಅಥವಾ ಸ್ವೀಕರಿಸುವ ವ್ಯಕ್ತಿಯ ಮೇಲೆ, ಬ್ಯಾಂಕ್ ಅಥವಾ ವ್ಯವಸ್ಥೆ ಏರ್ಪಾಡುದಾರನು, ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಯಾವುದೇ ಶುಲ್ಕವನ್ನು ವಿಧಿಸತಕ್ಕದ್ದಲ್ಲ.

**11. ಸಂದಾಯ ವ್ಯವಸ್ಥೆಯಲ್ಲಿ ಬದಲಾವಣೆಗೆ ನೋಟೀಸು.–** (1) ವ್ಯವಸ್ಥೆ ಏರ್ಪಾಡುದಾರನು, ಸಂದಾಯ ವ್ಯವಸ್ಥೆಯ ಯಾವ ಬದಲಾವಣೆಯು ಅದರ ರಚನೆ ಅಥವಾ ನಿರ್ವಹಣೆಗೆ ಬಾಧಕ ಉಂಟು ಮಾಡುವುದೋ ಅಂಥ ಯಾವುದೇ ಬದಲಾವಣೆಯನ್ನು,–

(ಎ) ರಿಸರ್ವ್ ಬ್ಯಾಂಕ್‌ನಿಂದ ಪೂರ್ವಾನುಮೋದನೆ ಪಡೆಯದೇ; ಮತ್ತು

(ಬಿ) ರಿಸರ್ವ್ ಬ್ಯಾಂಕ್‌ನ ಅನುಮೋದನೆಯ ತರುವಾಯ ವ್ಯವಸ್ಥೆಯ ಭಾಗೀದಾರರಿಗೆ ಮೂವತ್ತು ದಿನಗಳಿಗಿಂತ ಕಡಿಮೆಯಿರದ ನೋಟೀಸನ್ನು ನೀಡದೆ

– ಮಾಡಿಸತಕ್ಕದ್ದಲ್ಲ:

ಪರಂತು, ದೇಶದ ಹಣಕಾಸು ನೀತಿಯ ಹಿತದೃಷ್ಟಿಯಿಂದ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ, ರಿಸರ್ವ್ ಬ್ಯಾಂಕು, (ಬಿ) ಖಂಡದ ಮೇರೆಗೆ ವ್ಯವಸ್ಥೆ ಭಾಗೀದಾರರಿಗೆ ನೋಟೀಸನ್ನು ನೀಡದೆ ಅಥವಾ ಮೂವತ್ತು ದಿನಗಳಿಗಿಂತ ದೀರ್ಘ ಅವಧಿಯವರೆಗೆ ನೋಟೀಸನ್ನು ನೀಡಲು ವ್ಯವಸ್ಥೆ ಏರ್ಪಾಡುದಾರನನ್ನು ಅಗತ್ಯಪಡಿಸದೇ ಸಂದಾಯ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಮಾಡಲು ವ್ಯವಸ್ಥೆ ಏರ್ಪಾಡುದಾರನಿಗೆ ಅವಕಾಶ ನೀಡಬಹುದು.

(2) ರಿಸರ್ವ್ ಬ್ಯಾಂಕಿಗೆ, ಯಾವುದೇ ಕಾರಣಕ್ಕಾಗಿ ಪ್ರಸ್ತಾವಿತ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆ ಇದ್ದಲ್ಲಿ, ಅದು, ವ್ಯವಸ್ಥೆ ಏರ್ಪಾಡುದಾರನಿಂದ ಪ್ರಸ್ತಾವಿತ ಬದಲಾವಣೆಗಳ ಬಗ್ಗೆ ಸೂಚನೆಯನ್ನು ಸ್ವೀಕರಿಸಿದ ಎರಡು ವಾರಗಳ ಒಳಗಾಗಿ ವ್ಯವಸ್ಥೆ ಏರ್ಪಾಡುದಾರನಿಗೆ ಅಂಥ ಆಕ್ಷೇಪಣೆಯನ್ನು ತಿಳಿಸತಕ್ಕದ್ದು.

(3) ವ್ಯವಸ್ಥೆ ಏರ್ಪಾಡುದಾರನು, ರಿಸರ್ವ್ ಬ್ಯಾಂಕಿನಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿದ ಎರಡು ವಾರಗಳ ಅವಧಿಯೊಳಗೆ, ತನ್ನ ಅಭಿಪ್ರಾಯವನ್ನು ರಿಸರ್ವ್ ಬ್ಯಾಂಕಿಗೆ ತಿಳಿಸತಕ್ಕದ್ದು ಮತ್ತು ಪ್ರಸ್ತಾವಿತ ಬದಲಾವಣೆಗಳನ್ನು, ರಿಸರ್ವ್ ಬ್ಯಾಂಕಿನಿಂದ ಅನುಮೋದನೆ ಪಡೆದ ತರುವಾಯ ಮಾತ್ರವೇ ಬದಲಾವಣೆಗಳನ್ನು ಮಾಡಬಹುದು.

**12. ವಿವರಪಟ್ಟಿಕೆಗಳನ್ನು, ದಸ್ತಾವೇಜುಗಳನ್ನು ಅಥವಾ ಇತರ ಮಾಹಿತಿಯನ್ನು ತರಿಸಿಕೊಳ್ಳಲು ಅಧಿಕಾರ.–** ರಿಸರ್ವ್ ಬ್ಯಾಂಕ್, ತಾನು ಅಗತ್ಯಪಡಿಸಬಹುದಾದಂಥ ವಿವರಪಟ್ಟಿಕೆಗಳನ್ನು ಅಥವಾ ದಸ್ತಾವೇಜುಗಳನ್ನು ಅಥವಾ ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ಅಥವಾ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಅಂಥ ಮಧ್ಯಂತರಗಳಲ್ಲಿ ಸಂದಾಯ ವ್ಯವಸ್ಥೆಯ ನಿರ್ವಹಣೆಯ ಬಗ್ಗೆ ಇತರ ಮಾಹಿತಿಯನ್ನು ಯಾರೇ ವ್ಯವಸ್ಥೆ ಏರ್ಪಾಡುದಾರನಿಂದ ತರಿಸಿಕೊಳ್ಳಬಹುದು ಮತ್ತು ಅವನು ಅಂಥ ಆದೇಶವನ್ನು ಪಾಲಿಸತಕ್ಕದ್ದು.

**13. ಮಾಹಿತಿಯನ್ನು ಪಡೆಯಲು ಅವಕಾಶ.–** ರಿಸರ್ವ್ ಬ್ಯಾಂಕ್, ಯಾವುದೇ ಸಂದಾಯ ವ್ಯವಸ್ಥೆಯ ನಿರ್ವಹಣೆಗೆ ಮತ್ತು ವ್ಯವಸ್ಥೆ ಏರ್ಪಾಡುದಾರನಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಪಡೆಯಲು ಹಕ್ಕನ್ನು ಹೊಂದಿರತಕ್ಕದ್ದು

ಮತ್ತು ವ್ಯವಸ್ಥೆಯ ಎಲ್ಲಾ ಭಾಗೀದಾರರು, ಅಂಥ ಮಾಹಿತಿಯನ್ನು ಪಡೆಯುವ ಅವಕಾಶವನ್ನು ರಿಸರ್ವ್ ಬ್ಯಾಂಕಿಗೆ ಒದಗಿಸತಕ್ಕದ್ದು.

**14. ಆವರಣಗಳನ್ನು ಪ್ರವೇಶಿಸಲು ಮತ್ತು ದಸ್ತಾವೇಜುಗಳನ್ನು ತಪಾಸಣೆ ಮಾಡಲು ಅಧಿಕಾರ.–** ರಿಸರ್ವ್ ಬ್ಯಾಂಕ್, ಈ ಬಗ್ಗೆ ಲಿಖಿತದಲ್ಲಿ, ತಾನು ಯುಕ್ತವಾಗಿ ಅಧಿಕೃತಗೊಳಿಸಿದ ರಿಸರ್ವ್ ಬ್ಯಾಂಕಿನ ಯಾರೇ ಅಧಿಕಾರಿಯು, ಈ ಅಧಿನಿಯಮದ ಉಪಬಂಧಗಳ ಅಥವಾ ಯಾವುವೇ ವಿನಿಯಮಗಳ ಪಾಲನೆ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ, ಸಂದಾಯ ವ್ಯವಸ್ಥೆಯು ಎಲ್ಲಿ ನಿರ್ವಹಣೆಯಾಗುತ್ತಿದೆಯೋ ಆ ಯಾವುವೇ ಆವರಣಗಳನ್ನು ಪ್ರವೇಶಿಸಬಹುದು ಮತ್ತು ಅಂಥ ಆವರಣಗಳಲ್ಲಿ ಇರುವ ಯಾವುದೇ ಕಂಪ್ಯೂಟರ್ ವ್ಯವಸ್ಥೆಯನ್ನು ಅಥವಾ ಇತರ ದಸ್ತಾವೇಜುಗಳನ್ನು ಒಳಗೊಂಡಂತೆ ಯಾವುದೇ ಉಪಕರಣವನ್ನು ತಪಾಸಣೆ ಮಾಡಬಹುದು ಮತ್ತು ಅಂಥ ಅಧಿಕಾರಿಯು ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಒದಗಿಸಲು ಅಂಥ ಆವರಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಥ ವ್ಯವಸ್ಥೆ ಏರ್ಪಾಡುದಾರನ ಯಾರೇ ನೌಕರನನ್ನು ಅಥವಾ ಅದರ ಭಾಗೀದಾರನನ್ನು ಅಥವಾ ಯಾರೇ ಇತರ ವ್ಯಕ್ತಿಯನ್ನು ಕೇಳಬಹುದು.

**15. ಮಾಹಿತಿ, ಇತ್ಯಾದಿಯನ್ನು ಗೋಪ್ಯವಾಗಿಡುವುದು.–** (1) ಉಪಪ್ರಕರಣ (2)ರ ಉಪಬಂಧಗಳಿಗೊಳಪಟ್ಟು, ಪ್ರಕರಣ 12 ರಿಂದ 14ರ (ಎರಡೂ ಪ್ರಕರಣಗಳು ಸೇರಿ) ಮೇರೆಗೆ ರಿಸರ್ವ್ ಬ್ಯಾಂಕು ಪಡೆದುಕೊಂಡ ಯಾವುದೇ ದಸ್ತಾವೇಜನ್ನು ಅಥವಾ ಮಾಹಿತಿಯನ್ನು ಗೋಪ್ಯವಾಗಿಟ್ಟಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ರಿಸರ್ವ್ ಬ್ಯಾಂಕು, ಪ್ರಕರಣ 12 ರಿಂದ 14 ರ (ಎರಡೂ ಪ್ರಕರಣಗಳು ಸೇರಿ) ಮೇರೆಗೆ ತಾನು ಪಡೆದುಕೊಂಡ ಯಾವುದೇ ದಸ್ತಾವೇಜನ್ನು ಅಥವಾ ಮಾಹಿತಿಯನ್ನು, ಸಂದಾಯ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು, ಕಾರ್ಯ ಸಮರ್ಥತೆಯನ್ನು ಅಥವಾ ಭದ್ರತೆಯನ್ನು ಸಂರಕ್ಷಿಸುವುದಕ್ಕಾಗಿ ಅಥವಾ ಬ್ಯಾಂಕಿಂಗ್ ಅಥವಾ ಹಣಕಾಸು ನೀತಿಯ ಹಿತದೃಷ್ಟಿಯಿಂದ ಅಥವಾ ಸಾಮಾನ್ಯವಾಗಿ ಸಂದಾಯ ವ್ಯವಸ್ಥೆಗಳ ನಿರ್ವಹಣೆಯ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ಯಾವ ವ್ಯಕ್ತಿಗೆ ತಿಳಿಯಪಡಿಸುವುದು ಅವಶ್ಯಕವೆಂದು ಪರಿಗಣಿಸುವುದೋ ಆ ವ್ಯಕ್ತಿಗೆ, ಅಂಥ ದಸ್ತಾವೇಜನ್ನು ಅಥವಾ ಮಾಹಿತಿಯನ್ನು ತಿಳಿಯಪಡಿಸಬಹುದು.

**16. ಲೆಕ್ಕಪರಿಶೋಧನೆ ಮತ್ತು ತಪಾಸಣೆ ಮಾಡಲು ಅಧಿಕಾರ.–** ರಿಸರ್ವ್ ಬ್ಯಾಂಕು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಸಂದಾಯ ವ್ಯವಸ್ಥೆಯ ಅಥವಾ ಅದರ ಭಾಗೀದಾರರ ಲೆಕ್ಕಪರಿಶೋಧನೆಗಳನ್ನು ಮತ್ತು ತಪಾಸಣೆಗಳನ್ನು ಮಾಡಬಹುದು ಅಥವಾ ಮಾಡಿಸಬಹುದು ಮತ್ತು ಸಂದರ್ಭಾನುಸಾರ ಅಂಥ ಲೆಕ್ಕಪರಿಶೋಧನೆಯನ್ನು ಅಥವಾ ತಪಾಸಣೆಗಳನ್ನು ಮಾಡಲು ರಿಸರ್ವ್ ಬ್ಯಾಂಕಿಗೆ ನೆರವಾಗುವುದು ವ್ಯವಸ್ಥೆ ಏರ್ಪಾಡುದಾರನ ಮತ್ತು ವ್ಯವಸ್ಥೆಯ ಭಾಗೀದಾರರ ಕರ್ತವ್ಯವಾಗಿರತಕ್ಕದ್ದು.

**17. ನಿರ್ದೇಶನಗಳನ್ನು ನೀಡಲು ಅಧಿಕಾರ.–** (ಎ) ಸಂದಾಯ ವ್ಯವಸ್ಥೆಯು ಅಥವಾ ವ್ಯವಸ್ಥೆಯ ಭಾಗೀದಾರನು, ಇಡೀ ವ್ಯವಸ್ಥೆಗೆ ಆಗಬಹುದಾದ ಹಾನಿಯ ಅಸಮರ್ಪಕ ನಿಯಂತ್ರಣದಲ್ಲಿ ಪರಿಣಮಿಸುವ ಅಥವಾ ಪರಿಣಮಿಸುವ ಸಂಭವವಿರುವ ಯಾವುದೇ ಕೃತ್ಯದಲ್ಲಿ, ಲೋಪದಲ್ಲಿ ಅಥವಾ ನಿರ್ವಹಣೆಯ ಕ್ರಮದಲ್ಲಿ ತೊಡಗಿದೆಯೆಂದು ಅಥವಾ ತೊಡಗುವ ಸಂಭವವಿದೆಯೆಂದು ಅಥವಾ ತೊಡಗಿರುವನೆಂದು ಅಥವಾ ತೊಡಗಲಿದ್ದಾನೆಂದು; ಅಥವಾ

(ಬಿ) ಖಂಡ (ಎ) ಮೇರೆಗಿನ ಯಾವುದೇ ಕಾರ್ಯವು ಸಂದಾಯ ವ್ಯವಸ್ಥೆಗೆ, ದೇಶದ ಹಣಕಾಸು ನೀತಿಗೆ ಅಥವಾ ಸಾಲ ನೀಡಿಕೆ ನೀತಿಗೆ ಬಾಧಕವನ್ನುಂಟು ಮಾಡುವ ಸಂಭವವಿದೆಯೆಂದು ಅಭಿಪ್ರಾಯಪಟ್ಟಲ್ಲಿ, ರಿಸರ್ವ್ ಬ್ಯಾಂಕು, ನಿರ್ದಿಷ್ಟಪಡಿಸಬಹುದಾದಂಥ ಅವಧಿಯ ಒಳಗೆ,-

(i) ಅಂಥ ಕಾರ್ಯದಲ್ಲಿ, ಲೋಪದಲ್ಲಿ ಅಥವಾ ನಿರ್ವಹಣೆ ಕ್ರಮದಲ್ಲಿ ತೊಡಗಿರುವುದನ್ನು ನಿಲ್ಲಿಸಬೇಕೆಂದು ಮತ್ತು ಅದನ್ನು ಬಿಟ್ಟುಬಿಡಬೇಕೆಂದು ಅಥವಾ ಅಂಥ ಕೃತ್ಯವನ್ನು ಲೋಪವನ್ನು ಅಥವಾ ನಿರ್ವಹಣಾ ಕ್ರಮವನ್ನು ನಿಲ್ಲಿಸಿರುವುದನ್ನು ಅಥವಾ ಬಿಟ್ಟುಬಿಟ್ಟಿರುವುದನ್ನು ವ್ಯವಸ್ಥೆಯ ಭಾಗೀದಾರನು ಖಚಿತಪಡಿಸಿಕೊಳ್ಳಬೇಕೆಂದು; ಅಥವಾ

(ii) ರಿಸರ್ವ್ ಬ್ಯಾಂಕ್, ಅಂಥ ಪರಿಸ್ಥಿತಿಯನ್ನು ನಿವಾರಿಸಲು ಯಾವ ಕಾರ್ಯಗಳು ಅವಶ್ಯಕವಾಗಬಹುದೆಂದು ರಿಸರ್ವ್ ಬ್ಯಾಂಕು ಅಭಿಪ್ರಾಯಪಡುವುದೋ ಅಂಥ ಕೃತ್ಯಗಳನ್ನು ನೆರವೇರಿಸಲು

– ಅಂಥ ಸಂದಾಯ ವ್ಯವಸ್ಥೆಗೆ ಅಥವಾ ವ್ಯವಸ್ಥೆಯ ಭಾಗೀದಾರನಿಗೆ ಲಿಖಿತದಲ್ಲಿ ನಿರ್ದೇಶನಗಳನ್ನು ನೀಡಬಹುದು.

**18. ನಿರ್ದೇಶನಗಳನ್ನು ನೀಡಲು ಸಾಮಾನ್ಯವಾಗಿ ರಿಸರ್ವ್ ಬ್ಯಾಂಕಿನ ಅಧಿಕಾರ.–** ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ರಿಸರ್ವ್ ಬ್ಯಾಂಕ್, ಸಂದಾಯ ವ್ಯವಸ್ಥೆಗಳನ್ನು ವಿನಿಯಮಿಸಲು ತನಗೆ ಸಾಧ್ಯವಾಗುವಂತೆ ಮಾಡುವ ಉದ್ದೇಶಕ್ಕಾಗಿ ಅಥವಾ ಯಾವುದೇ ಸಂದಾಯ ವ್ಯವಸ್ಥೆಗಳಲ್ಲಿ ಯಾವುದೇ ಸಂದಾಯ ವ್ಯವಸ್ಥೆಯ ವ್ಯವಸ್ಥಾಪನೆಯ ಅಥವಾ ನಿರ್ವಹಣೆಯ ಹಿತದೃಷ್ಟಿಯಿಂದ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ, ದೇಶಿಯ ವ್ಯವಹಾರಗಳಿಗೆ ಸಂಬಂಧಪಡುವ ವಿದ್ಯುನ್ಮಾನ, ವಿದ್ಯುನ್ಮಾನೇತರ, ದೇಶಿಯ ಮತ್ತು ಅಂತರರಾಷ್ಟ್ರೀಯ ಸಂದಾಯ ವ್ಯವಸ್ಥೆಗಳನ್ನು ಒಳಗೊಂಡು ಸಂದಾಯ ವ್ಯವಸ್ಥೆಗಳ ವಿನಿಯಮಕ್ಕೆ ಸಂಬಂಧಿಸುವ ನೀತಿಗಳನ್ನು ಗೊತ್ತುಪಡಿಸುವುದು, ಅವಶ್ಯಕವೆಂದು ವ್ಯವಸ್ಥೆ ಏರ್ಪಾಡುದಾರರಿಗೆ ಮತ್ತು ವ್ಯವಸ್ಥೆ ಭಾಗೀದಾರರಿಗೆ ಅಥವಾ ಸಾಮಾನ್ಯವಾಗಿ ಯಾರೇ ಇತರ ವ್ಯಕ್ತಿಗೆ ಅಥವಾ ಅಂಥ ಯಾವುದೇ ಏಜೆನ್ಸಿಗೆ ಮತ್ತು ನಿರ್ದಿಷ್ಟವಾಗಿ ಸಂದಾಯ ವ್ಯವಸ್ಥೆಗಳಿಗೆ ಸಂಬಂಧಿಸಿದ ವ್ಯವಹಾರದ ನಿರ್ವಹಣೆಗೆ ಸಂಬಂಧಪಟ್ಟಂತೆ ಲಿಖಿತದಲ್ಲಿ ನಿರ್ದೇಶನಗಳನ್ನು ನೀಡುವುದು ಅವಶ್ಯಕವೆಂದು ಮನದಟ್ಟಾದರೆ ಅದು ಹಾಗೆ ಮಾಡಬಹುದು.

**19. ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಪಾಲಿಸುವುದು.–** ಈ ಅಧಿನಿಯಮದ ಮೇರೆಗೆ ರಿಸರ್ವ್ ಬ್ಯಾಂಕ್ ಯಾವ ವ್ಯಕ್ತಿಗೆ ನಿರ್ದೇಶನವನ್ನು ನೀಡಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ವಿಳಂಬ ಮಾಡದೇ ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ಪಾಲನೆ ವರದಿಯನ್ನು ರಿಸರ್ವ್ ಬ್ಯಾಂಕ್ ಅನುಮತಿಸಿದ ಕಾಲದೊಳಗೆ ಅದಕ್ಕೆ ಒದಗಿಸತಕ್ಕದ್ದು.

## ಅಧ್ಯಾಯ V

## ವ್ಯವಸ್ಥೆ ಏರ್ಪಾಡುದಾರನ ಹಕ್ಕುಗಳು ಮತ್ತು ಕರ್ತವ್ಯಗಳು

**20. ವ್ಯವಸ್ಥೆ ಏರ್ಪಾಡುದಾರನು, ಅಧಿನಿಯಮ, ವಿನಿಯಮಗಳು, ಇತ್ಯಾದಿಗಳಿಗೆ ಅನುಸಾರವಾಗಿ ಕಾರ್ಯ ನಿರ್ವಹಿಸುವುದು.–** ಪ್ರತಿಯೊಬ್ಬ ವ್ಯವಸ್ಥೆ ಏರ್ಪಾಡುದಾರನು ಈ ಅಧಿನಿಯಮದ, ವಿನಿಯಮಗಳ, ವ್ಯವಸ್ಥೆ ಭಾಗೀದಾರರ ನಡುವಣ ಸಂಬಂಧಕ್ಕೆ ಅನ್ವಯವಾಗುವ ಕರಾರಿನ ಯಾವ ಉಪಬಂಧಗಳಿಗೆ, ಸಂದಾಯ ವ್ಯವಸ್ಥೆಯ ನಿರ್ವಹಣೆಗೆ

ಅನ್ವಯವಾಗುವುದೋ, ಆ ನಿಯಮಗಳ ಮತ್ತು ವಿನಿಯಮಗಳ ಉಪಬಂಧಗಳಿಗೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಅಧಿಕಾರವನ್ನು ನೀಡಲಾಗುತ್ತದೋ ಆ ಷರತ್ತುಗಳಿಗೆ ಅನುಸಾರವಾಗಿ ಸಂದಾಯ ವ್ಯವಸ್ಥೆಯನ್ನು ನಿರ್ವಹಿಸತಕ್ಕದ್ದು.

**21. ವ್ಯವಸ್ಥೆ ಏರ್ಪಾಡುದಾರನ ಕರ್ತವ್ಯಗಳು.–** (1) ಪ್ರತಿಯೊಬ್ಬ ವ್ಯವಸ್ಥೆ ಏರ್ಪಾಡುದಾರನು, ಸಂದಾಯ ವ್ಯವಸ್ಥೆಯ ಮೇರೆಗೆ ಹೊಣೆಗಾರಿಕೆಗಳು ಮತ್ತು ಬಾಧ್ಯತೆ ಪರಿಮಿತಿಗಳನ್ನು ಒಳಗೊಂಡ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಈಗಿರುವ ವ್ಯವಸ್ಥೆ ಭಾಗಿಧಾರನಿಗೆ ಅಥವಾ ವ್ಯವಸ್ಥೆಗೆ ಮುಂದೆ ಭಾಗಿಯಾಗತಕ್ಕಂಥ ಭಾಗೀದಾರರಿಗೆ ತಿಳಿಯಪಡಿಸತಕ್ಕದ್ದು, ಸಂದಾಯ ವ್ಯವಸ್ಥೆಯ ನಿರ್ವಹಣೆಗೆ ನಿವ್ವಳೀಕರಣ ವ್ಯವಸ್ಥೆಗಳಿಗೆ ಅನ್ವಯವಾಗುವ ನಿಯಮಗಳ ಮತ್ತು ವಿನಿಯಮಗಳ ಮತ್ತು ಇತರ ಸಂಬಂಧಪಟ್ಟ ದಸ್ತಾವೇಜುಗಳ ಪ್ರತಿಗಳನ್ನು ಅಂಥ ಭಾಗೀದಾರರಿಗೆ ಒದಗಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ನಿರ್ಧರಿಸಿದ ಮಾನಕಗಳನ್ನು ನಿರ್ವಹಣೆ ಮಾಡುವುದು, ಪ್ರತಿಯೊಬ್ಬ ವ್ಯವಸ್ಥೆ ಏರ್ಪಾಡುದಾರನ ಕರ್ತವ್ಯವಾಗಿರತಕ್ಕದ್ದು.

**22. ಸಂದಾಯ ವ್ಯವಸ್ಥೆಯಲ್ಲಿನ ದಸ್ತಾವೇಜುಗಳನ್ನು ಗೋಪ್ಯವಾಗಿಡುವ ಕರ್ತವ್ಯ.–** (1) ವ್ಯವಸ್ಥೆ ಏರ್ಪಾಡುದಾರನು, ಯಾವುದೇ ದಸ್ತಾವೇಜು ಅಥವಾ ಅದರ ಭಾಗವು ಇರುವುದನ್ನು ಅಥವಾ ಆ ದಸ್ತಾವೇಜಿನಲ್ಲಿರುವ ಅಥವಾ ಅದರ ಭಾಗದಲ್ಲಿರುವ ಒಳಾಂಶಗಳನ್ನು ಅಥವಾ ವ್ಯವಸ್ಥೆಗೆ ಭಾಗೀದಾರನಾಗಿರುವವನು ತನಗೆ ಕೊಟ್ಟ ಇತರ ಮಾಹಿತಿಯನ್ನು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಆ ಮಾಹಿತಿಯನ್ನು ತಿಳಿಯಪಡಿಸಬೇಕಾಗಿದ್ದ ಹೊರತು ಅಥವಾ ಸಂಬಂಧಪಟ್ಟ ವ್ಯವಸ್ಥೆಗೆ ಭಾಗೀದಾರನಾಗಿರುವವನು ಸ್ಪಷ್ಟ ಅಥವಾ ಇಂಗಿತ ಸಮ್ಮತಿಯೊಂದಿಗೆ ತಿಳಿಸಬೇಕಾದ ಹೊರತು ಅಥವಾ ಸಕ್ಷಮ ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯವು ಅಥವಾ ಶಾಸನದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶಾಸನಬದ್ಧ ಪ್ರಾಧಿಕಾರವು ಹೊರಡಿಸಿದ ಆದೇಶಗಳನ್ನು ಪಾಲಿಸಿ ತಿಳಿಸಬೇಕಾದ ಹೊರತು, ಯಾರೇ ಇತರ ವ್ಯಕ್ತಿಗೆ ತಿಳಿಸತಕ್ಕದ್ದಲ್ಲ.

(2) ಬ್ಯಾಂಕರ್ಸ್ ಪುಸ್ತಕ ಸಾಕ್ಷ್ಯ ಅಧಿನಿಯಮ, 1891 (1891ರ 18)ರ ಉಪಬಂಧಗಳು, ವ್ಯವಸ್ಥೆ ಏರ್ಪಾಡುದಾರನು ಯಾವುದೇ ರೂಪದಲ್ಲಿ ಇಟ್ಟಿರುವ ಮಾಹಿತಿಗೆ ಅಥವಾ ದಸ್ತಾವೇಜುಗಳಿಗೆ ಅಥವಾ ಇತರ ಪುಸ್ತಕಗಳಿಗೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದು.

**23. ಇತ್ಯರ್ಥ ಮತ್ತು ನಿವ್ವಳೀಕರಣ.–** (1) ವ್ಯವಸ್ಥೆಗೆ ಭಾಗೀದಾರರ ನಡುವಣ ಸಂದಾಯ ಬಾಧ್ಯತೆಗಳನ್ನು ಮತ್ತು ಇತ್ಯರ್ಥ ಸೂಚನೆಗಳನ್ನು, ಸಂದಾಯ ವ್ಯವಸ್ಥೆಗಾಗಿ ಅಧಿಕಾರವನ್ನು ನೀಡುವಾಗ, ರಿಸರ್ವ್ ಬ್ಯಾಂಕು ಸಂದರ್ಭಾನುಸಾರ, ಪ್ರಕರಣ 7ರ ಮೇರೆಗೆ ಅಥವಾ ಅಧಿನಿಯಮದ ಯಾವುದೇ ಇತರ ಉಪಬಂಧಗಳ ಮೇರೆಗೆ ಅನುಮೋದಿಸಿರಬಹುದಾದ ಒಟ್ಟು ಅಥವಾ ನಿವ್ವಳೀಕರಣ ಪ್ರಕ್ರಿಯೆಗೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

(2) ಸಂದಾಯ ವ್ಯವಸ್ಥೆಯ ನಿರ್ವಹಣೆಗಾಗಿ ಉಪಬಂಧ ಕಲ್ಪಿಸಿರುವ ನಿಯಮಗಳು, ವ್ಯವಸ್ಥೆಗೆ ಭಾಗೀದಾರರ ಮತ್ತು ಸಂದಾಯ ವ್ಯವಸ್ಥೆಯ ನಡುವೆ ನಷ್ಟಗಳ ಹಂಚಿಕೆಗಾಗಿ ಪ್ರಕ್ರಿಯೆಯನ್ನು ಸೂಚಿಸಿದ್ದರೆ, ಅಂಥ ಪ್ರಕ್ರಿಯೆಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

(3) ಅಂಥ ಪ್ರಕ್ರಿಯೆಯ ಮೇರೆಗೆ ಮಾಡಿದ ಇತ್ಯರ್ಥವು ಅಂತಿಮವಾದುದಾಗಿರತಕ್ಕದ್ದು ಮತ್ತು ರದ್ದಾಗುವಂಥದ್ದು ಆಗಿರತಕ್ಕದ್ದಲ್ಲ.

(4) ನ್ಯಾಯಾಧಿಕರಣ ಅಥವಾ ಪ್ರಾಧಿಕಾರ, ನ್ಯಾಯಾಲಯದ ಆದೇಶದ ಮೂಲಕ,–

(ಎ) ವ್ಯವಸ್ಥೆ ಭಾಗೀದಾರನು, ದಿವಾಳಿಯಾಗಿದ್ದಾನೆಂದು ಘೋಷಿಸಿದರೆ ಅಥವಾ ವ್ಯವಸ್ಥೆ ಭಾಗೀದಾರನನ್ನು ವಿಸರ್ಜಿಸಿದರೆ ಅಥವಾ ಪರಿಸಮಾಪ್ತಿಗೊಳಿಸಿದರೆ;

(ಬಿ) ಯಾರೇ ಸಮಾಪಕನನ್ನು ಅಥವಾ ಸ್ವೀಕರ್ತನನ್ನು ಅಥವಾ ಹಸ್ತಾಂತರಗ್ರಾಹಿಯನ್ನು (ಯಾವುದೇ ಹೆಸರಿನಿಂದ ಕರೆದರೂ), ತಾತ್ಕಾಲಿಕವಾಗಿಯಾಗಲಿ ಅಥವಾ ಅನ್ಯಥಾ ವ್ಯವಸ್ಥೆ ಭಾಗೀದಾರನು ದಿವಾಳಿಯಾಗಿರುವುದಕ್ಕೆ ಅಥವಾ ವಿಸರ್ಜಿಸಿರುವುದಕ್ಕೆ ಅಥವಾ ಪರಿಸಮಾಪ್ತಿಗೊಂಡಿರುವುದಕ್ಕೆ ಸಂಬಂಧಪಟ್ಟ ವ್ಯವಹರಣೆಯಲ್ಲಿ ನೇಮಕ ಮಾಡಿದರೆ

– ಆಗ, ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949 (1949ರ 10) ರಲ್ಲಿ ಅಥವಾ ಕಂಪನಿ ಅಧಿನಿಯಮ, 1956 (1956ರ 1) ರಲ್ಲಿ ಅಥವಾ ಕಂಪನಿ ಅಧಿನಿಯಮ, 2013 (2013ರ 18)ರಲ್ಲಿ ಅಥವಾ ದಿವಾಳಿ ಮತ್ತು ಸಾಲ ತೀರಿಕೆ ಅಸಮರ್ಥತೆ ಸಂಹಿತೆ, 2016 ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಅಂಥ ಆದೇಶವು, ಅಂಥ ಆದೇಶಕ್ಕೆ ಮುಂಚೆ ಅಥವಾ ನಿಕಟ ತರುವಾಯ ಅಂತಿಮವಾಗಿರುವ ಮತ್ತು ರದ್ದುಪಡಿಸಿರದಿರುವ ಯಾವುದೇ ಇತ್ಯರ್ಥಕ್ಕೆ ಮತ್ತು ಅಂಥ ವ್ಯವಸ್ಥೆ ಏರ್ಪಾಡುದಾರನಿಗೆ ಸಂಬಂಧಪಟ್ಟ ನಿಯಮಗಳಿಗೆ, ವಿನಿಯಮಗಳಿಗೆ ಅಥವಾ ಉಪವಿಧಿಗಳಿಗೆ ಅನುಸಾರವಾಗಿ ಅದರ ವ್ಯವಸ್ಥೆ ನಿಮಿತ್ತ ಅಥವಾ ಇತರ ಬಾಧ್ಯತೆಗಳ ನಿಮಿತ್ತ ವ್ಯವಸ್ಥೆ ಭಾಗೀದಾರರು ನೀಡಿದ ಯಾವುವೇ ಮೇಲಾಧಾರಗಳನ್ನು ಬಳಸಿಕೊಳ್ಳಲು ವ್ಯವಸ್ಥೆ ಏರ್ಪಾಡುದಾರನಿಗೆ ಇರುವ ಹಕ್ಕಿಗೆ ಬಾಧಕವಾಗತಕ್ಕದ್ದಲ್ಲ.

(5) ಉಪಪ್ರಕರಣ (4)ರಲ್ಲಿ ಉಲ್ಲೇಖಿಸಲಾದ ಆದೇಶವನ್ನು, ಮುಖ್ಯವಾಗಿ ವಿರೋಧಿಸುವ ಪಕ್ಷಕಾರನಿಗೆ ಸಂಬಂಧಪಟ್ಟಂತೆ ಮಾಡಿದರೆ, ಆಗ, ಅಂಥ ಆದೇಶದಲ್ಲಿ ಏನೇ ಇದ್ದರೂ ಅಥವಾ ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949 (1949ರ 10)ರಲ್ಲಿ ಅಥವಾ ಕಂಪನಿ ಅಧಿನಿಯಮ, 1956 (1956ರ 1)ರಲ್ಲಿ ಅಥವಾ ಕಂಪನಿ ಅಧಿನಿಯಮ, 2013 (2013ರ 18)ರಲ್ಲಿ ಅಥವಾ ದಿವಾಳಿ ಮತ್ತು ಸಾಲ ತೀರಿಕೆ ಅಸಮರ್ಥತೆ ಸಂಹಿತೆ, 2016ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಮುಂದಿನ ದಿನಾಂಕದಲ್ಲಿ ಇತ್ಯರ್ಥಕ್ಕಾಗಿ ಒಪ್ಪಿಕೊಂಡಿದ್ದ ವ್ಯವಹಾರಗಳಿಂದ ಉದ್ಭವಿಸುವವುಗಳನ್ನು ಒಳಗೊಂಡು, ಮುಖ್ಯವಾಗಿ ವಿರೋಧಿಸುವ ಪ್ರತಿ ಪಕ್ಷಕಾರನ ಮತ್ತು ವ್ಯವಸ್ಥೆ ಭಾಗೀದಾರರ ನಡುವಣ ಸಂದಾಯ ಬಾಧ್ಯತೆಗಳನ್ನು ಮತ್ತು ಇತ್ಯರ್ಥದ ಸೂಚನೆಗಳನ್ನು, ಪ್ರಮಾಣೀಕರಣ ನೀಡುವಾಗ ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳ ಮೇರೆಗೆ ರಿಸರ್ವ್ ಬ್ಯಾಂಕ್‌ನಿಂದ ಅನುಮೋದಿತವಾದ, ಸಂದರ್ಭಾನುಸಾರ ಒಟ್ಟು ಅಥವಾ ನಿವ್ವಳೀಕರಣ ಪ್ರಕ್ರಿಯೆಗನುಸಾರವಾಗಿ ಅಂಥ ಮುಖ್ಯವಾಗಿ ವಿರೋಧಿಸುವ ಪಕ್ಷಕಾರನು ಕೂಡಲೆ ನಿರ್ಧರಿಸತಕ್ಕದ್ದು ಮತ್ತು ಅಂಥ ನಿರ್ಧರಣೆಯು, ಅಂತಿಮವಾಗಿರತಕ್ಕದ್ದು ಮತ್ತು ರದ್ದುಪಡಿಸಲಾಗದಂಥಾದ್ದಾಗಿರತಕ್ಕದ್ದು.

(6) ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949 (1949 ರ 10) ರಲ್ಲಿ ಅಥವಾ ಕಂಪನಿ ಅಧಿನಿಯಮ, 1956 (1956ರ 1) ರಲ್ಲಿ ಅಥವಾ ಕಂಪನಿ ಅಧಿನಿಯಮ, 2013 (2013ರ 18) ರಲ್ಲಿ ಅಥವಾ ದಿವಾಳಿ ಮತ್ತು ಸಾಲ ತೀರಿಕೆ ಅಸಮರ್ಥತೆ ಸಂಹಿತೆ, 2016 ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ತಾತ್ಕಾಲಿಕವಾಗಿ ಅಥವಾ ಅನ್ಯಥಾ ನೇಮಕಗೊಂಡಿರುವ, ಮುಖ್ಯವಾಗಿ ವಿರೋಧಿಸುವ ಪ್ರತಿ ಪಕ್ಷಕಾರನ ಯಾರೇ ಸಮಾಪಕನು ಅಥವಾ ಸ್ವೀಕರ್ತನು ಅಥವಾ (ಯಾವುದೇ ಹೆಸರಿನಿಂದ ಕರೆದಿರುವ), ಹಸ್ತಾಂತರ ಗ್ರಾಹಿಯು,–

(ಎ) ಅಂತಿಮವಾಗಿರುವ ಮತ್ತು ರದ್ದುಪಡಿಸಲಾಗದಿರುವ ಯಾವುದೇ ನಿರ್ಧರಣೆಯನ್ನು ಪುನಃ ಆರಂಭಿಸತಕ್ಕದ್ದಲ್ಲ;

(ಬಿ) ಮುಖ್ಯವಾಗಿ ವಿರೋಧಿಸುವ ಪಕ್ಷಕಾರನ ನಿಯಮಗಳಿಗೆ, ವಿನಿಯಮಗಳಿಗೆ ಅಥವಾ ಉಪವಿಧಿಗಳಿಗೆ ಅನುಸಾರವಾಗಿ ವ್ಯವಸ್ಥೆ ಭಾಗೀದಾರರು, ಅವರು ಮಾಡಿಕೊಂಡ ಇತ್ಯರ್ಥದ ನಿಮಿತ್ತ ಅಥವಾ ಇತರೆ ಬಾಧ್ಯತೆಗಳ ನಿಮಿತ್ತ ಒದಗಿಸಿದ ಮೇಲಾಧಾರಗಳನ್ನು ಬಳಸಿಕೊಂಡ ತರುವಾಯ, ಹೆಚ್ಚುವರಿಯಾಗಿ ಹೊಂದಿರುವ ಮೇಲಾಧಾರಗಳನ್ನು ಸಂಬಂಧಪಟ್ಟ ವ್ಯವಸ್ಥೆ ಭಾಗೀದಾರರಿಗೆ ಹಿಂದಿರುಗಿಸತಕ್ಕದ್ದು.

**ವಿವರಣೆ 1.–** ಸಂದೇಹಗಳ ನಿವಾರಣೆಗಾಗಿ, ಈ ಪ್ರಕರಣದಲ್ಲಿ ಉಲ್ಲೇಖಿಸಿದ ಇತ್ಯರ್ಥವು ಅದು ಒಟ್ಟಾರೆಯದು ಅಥವಾ ನಿವ್ವಳದ್ದು ಆಗಿರಬಹುದು, ಅಂಥ ಇತ್ಯರ್ಥದ ಪರಿಣಾಮವಾಗಿ ಸಂದಾಯ ಮಾಡಬೇಕಾದ ಹಣವನ್ನು, ಭದ್ರತೆಗಳನ್ನು, ವಿದೇಶಿ ವಿನಿಯಮಯವನ್ನು, ಉತ್ಪಾದಿತ ವಸ್ತುಗಳನ್ನು ಅಥವಾ ಇತರ ವ್ಯವಹಾರಗಳನ್ನು ನಿರ್ಧರಣೆ ಮಾಡಿದಾಕ್ಷಣವೇ ಅಂಥ ಹಣವನ್ನು, ಭದ್ರತೆಗಳನ್ನು, ವಿದೇಶಿ ವಿನಿಮಯವನ್ನು, ಉತ್ಪಾದಿತ ವಸ್ತುಗಳನ್ನು ವಾಸ್ತವಿಕವಾಗಿ ಸಂದಾಯ ಮಾಡಿರಲಿ ಅಥವಾ ಮಾಡಿರದಿರಲಿ ಅಥವಾ ಇತರ ವ್ಯವಹಾರಗಳನ್ನು ವಾಸ್ತವಿಕವಾಗಿ ಮಾಡಿ ಮುಗಿಸಿರಲಿ ಅಥವಾ ಮುಗಿಸಿರದಿರಲಿ ಅಂತಿಮವಾದುದೆಂದು ಅಥವಾ ರದ್ದು ಮಾಡಲಾಗದುದೆಂದು ಈ ಮೂಲಕ ಘೋಷಿಸಲಾಗಿದೆ.

**ವಿವರಣೆ 2.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಮುಖ್ಯವಾಗಿ ವಿರೋಧಿಸುವ ಪ್ರತಿ ಪಕ್ಷಕಾರ" ಎಂದರೆ, ವ್ಯವಸ್ಥೆ ಭಾಗೀದಾರರ ವ್ಯವಹಾರಗಳ ಇತ್ಯರ್ಥದ ಉದ್ದೇಶಕ್ಕಾಗಿ, ಅಂಥ ಒಪ್ಪಿಕೊಂಡಿರುವ ಇತ್ಯರ್ಥಕ್ಕಾಗಿ ವ್ಯವಹಾರಗಳಲ್ಲಿ ವ್ಯವಸ್ಥೆ ಭಾಗೀದಾರರಾಗಿರುವವರ ನಡುವೆ ಯಾರು ಬದಲಿಯಾಗಿ ಪ್ರವೇಶಿಸುವನೋ ಹಾಗೆ ಪ್ರವೇಶಿಸಿ, ಪ್ರತಿಯೊಬ್ಬ ಮಾರಾಟಗಾರನಿಗೆ ಖರೀದಿದಾರನಾಗುವನೋ ಮತ್ತು ಪ್ರತಿಯೊಬ್ಬ ಖರೀದಿದಾರನಿಗೆ ಮಾರಾಟಗಾರನಾಗುವನೋ, ಆ ವ್ಯವಸ್ಥೆ ಏರ್ಪಾಡುದಾರ.

**23ಎ. ಗ್ರಾಹಕರಿಂದ ಸಂಗ್ರಹಿಸಿದ ನಿಧಿಗಳ ಸಂರಕ್ಷಣೆ.–** (1) ರಿಸರ್ವ್ ಬ್ಯಾಂಕು, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಗೊತ್ತುಪಡಿಸಿದ ಸಂದಾಯ ವ್ಯವಸ್ಥೆಗಳ ಗ್ರಾಹಕರ ಹಿತದೃಷ್ಟಿಯಿಂದ ಅಥವಾ ಅಂಥ ಗೊತ್ತುಪಡಿಸಿದ ವ್ಯವಹಾರಗಳು ಅದರ ಗ್ರಾಹಕರ ಹಿತಾಸಕ್ತಿಗಳಿಗೆ ಬಾಧಕವಾಗುವ ರೀತಿಯಲ್ಲಿ ನಡೆಸುವುದನ್ನು ತಡೆಯಲು ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ, ಗೊತ್ತುಪಡಿಸಿದ ಸಂದಾಯಕ್ಕೆ ಸಂಬಂಧಪಟ್ಟ ವ್ಯವಸ್ಥೆ ಏರ್ಪಾಡುದಾರನು ಅದರ ಗ್ರಾಹಕರಿಂದ ಸಂಗ್ರಹಿಸಿದ ಮತ್ತು ಬಾಕಿಯಿರುವ ಉಳಿಕೆ ಮೊಬಲಗುಗಳ ಅಂಥ ಶೇಕಡಾವಾರಿಗೆ ಸಮಾನ ಮೊಬಲಗನ್ನು,–

(ಎ) ಅನುಸೂಚಿತ ವಾಣಿಜ್ಯ ಬ್ಯಾಂಕಿನಲ್ಲಿ ಇರುವ ಪ್ರತ್ಯೇಕ ಖಾತೆಯಲ್ಲಿ ಅಥವಾ ಖಾತೆಗಳಲ್ಲಿ ಜಮೆ ಮಾಡಲು ಮತ್ತು ಜಮೆಯಾಗಿರುವುದನ್ನು ಇಟ್ಟುಕೊಳ್ಳಲು; ಅಥವಾ

(ಬಿ) ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ನಮೂನೆಯಲ್ಲಿ ನಗದು ಪರಿವರ್ತನೀಯ ಆಸ್ತಿಗಳನ್ನು ನಿರ್ವಹಿಸಲು

– ಅಂಥ ಸಂದಾಯ ವ್ಯವಸ್ಥೆಯ ವ್ಯವಸ್ಥೆ ಏರ್ಪಾಡುದಾರನನ್ನು ಅಗತ್ಯಪಡಿಸಬಹುದು:

ಪರಂತು, ರಿಸರ್ವ್ ಬ್ಯಾಂಕು, ಗೊತ್ತುಪಡಿಸಿದ ಸಂದಾಯ ವ್ಯವಸ್ಥೆಗಳ ವಿವಿಧ ಪ್ರವರ್ಗಗಳಿಗಾಗಿ ವಿವಿಧ ಶೇಕಡಾವಾರುಗಳನ್ನು ಮತ್ತು ಅಂಥ ರೀತಿಯನ್ನು ಮತ್ತು ನಮೂನೆಗಳನ್ನು ನಿರ್ದಿಷ್ಟಪಡಿಸಬಹುದು.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಖಾತೆ ಅಥವಾ ಖಾತೆಗಳಲ್ಲಿ ಇರುವ ಉಳಿಕೆ ಮೊಬಲಗನ್ನು, ಗ್ರಾಹಕರು ಸಂದಾಯ ವ್ಯವಸ್ಥೆಯ ಬಳಕೆಯ ಕಾರಣದಿಂದಾಗಿ ಉದ್ಭವಿಸುವ ಹೊಣೆಗಾರಿಕೆಗಳನ್ನು ನಿರ್ವಹಣೆ ಮಾಡುವುದಕ್ಕಾಗಿ ಅಥವಾ ಗ್ರಾಹಕರಿಗೆ ಮರು ಸಂದಾಯ ಮಾಡುವುದಕ್ಕಾಗಿ ಅಥವಾ ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಉದ್ದೇಶಕ್ಕಾಗಿ ಹೊರತುಪಡಿಸಿ, ಯಾವುದೇ ಇತರ ಉದ್ದೇಶಕ್ಕಾಗಿ ಬಳಸಿಕೊಳ್ಳತಕ್ಕದ್ದಲ್ಲ.

(3) ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949 (1949ರ 10) ರಲ್ಲಿ ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1) ರಲ್ಲಿ ಅಥವಾ ಕಂಪನಿಗಳ ಅಧಿನಿಯಮ, 2013 (2013ರ 18) ಅಥವಾ ದಿವಾಳಿ ಮತ್ತು ಸಾಲ ತೀರಿಕೆ ಅಸಮರ್ಥತೆ ಸಂಹಿತೆ, 2016 ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಉಪಪ್ರಕರಣ (2)ರ ಮೇರೆಗೆ ಸಂದಾಯವನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಗಳು, ಖಾತೆಯಲ್ಲಿ ಇರುವ ಉಳಿಕೆ ಮೊಬಲಗಿನ ಮೇಲೆ ಪ್ರಥಮ ಮತ್ತು ಪ್ರಧಾನ ಚಾರ್ಜನ್ನು ಹೊಂದಿರತಕ್ಕದ್ದು ಮತ್ತು ಗೊತ್ತುಪಡಿಸಲಾದ ಸಂದಾಯ ವ್ಯವಸ್ಥೆಯ ವ್ಯವಸ್ಥೆ ಏರ್ಪಾಡುದಾರನು ಅಥವಾ ಸಂಬಂಧಪಟ್ಟ ಅನುಸೂಚಿತ ವಾಣಿಜ್ಯ ಬ್ಯಾಂಕಿನ ಸಮಾಪಕನು ಅಥವಾ ಸ್ವೀಕರ್ತನು ಅಥವಾ ಹಸ್ತಾಂತರಗ್ರಾಹಿಯು (ಯಾವುದೇ ಹೆಸರಿನಿಂದ ಕರೆದಿರಲಿ), ತಾತ್ಕಾಲಿಕವಾಗಿ ನೇಮಕವಾಗಿರಲಿ ಅಥವಾ ಅನ್ಯಥಾ, ಅಂಥ ಎಲ್ಲಾ ವ್ಯಕ್ತಿಗಳು ಸಂಪೂರ್ಣವಾಗಿ ಸಂದಾಯ ಮಾಡುವವರೆಗೆ ಅಥವಾ ಅದಕ್ಕೆ ಸಾಕಷ್ಟು ಏರ್ಪಾಟು ಮಾಡುವವರೆಗೆ ಯಾವುದೇ ಇತರ ಉದ್ದೇಶಗಳಿಗಾಗಿ ಸದರಿ ಬಾಕಿಗಳನ್ನು ಬಳಸಿಕೊಳ್ಳತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, ಈ ಕೆಳಕಂಡ ಪದಾವಳಿಗಳು ಎಂದರೆ:–

(ಎ) "ಗೊತ್ತುಪಡಿಸಿದ ಸಂದಾಯ ವ್ಯವಸ್ಥೆ" ಎಂದರೆ ರಿಸರ್ವ್ ಬ್ಯಾಂಕು, ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ, ಸಂದಾಯ ಸೇವೆಗಾಗಿ ಅದರ ಗ್ರಾಹಕರಿಂದ ನಿಧಿಗಳ ಸಂಗ್ರಹಣೆಯಲ್ಲಿ ನಿರತವಾದ ಸಂದಾಯ ವ್ಯವಸ್ಥೆ ಅಥವಾ ಸಂದಾಯ ವ್ಯವಸ್ಥೆಯ ವರ್ಗ;

(ಬಿ) "ಅನುಸೂಚಿತ ವಾಣಿಜ್ಯ ಬ್ಯಾಂಕ್" ಎಂದರೆ, "ಬ್ಯಾಂಕಿಂಗ್ ಕಂಪನಿ", "ಸಂವಾದಿ ಹೊಸ ಬ್ಯಾಂಕ್", "ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ" ಮತ್ತು ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949 (1949ರ 10)ರ ಪ್ರಕರಣ 5ರಲ್ಲಿ ಪರಿಭಾಷಿಸಿರುವ ಮತ್ತು ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949 (1949ರ 10) ರ ಪ್ರಕರಣ 5ರಲ್ಲಿ ಪರಿಭಾಷಿಸಿರುವ ಮತ್ತು ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 1) ಎರಡನೇ ಅನುಸೂಚಿಯನ್ನು ಒಳಗೊಂಡಿರುವ "ಸಹಾಯಕ ಬ್ಯಾಂಕ್".

## ಅಧ್ಯಾಯ VI

## ವಿವಾದಗಳ ಇತ್ಯರ್ಥ

**24. ವಿವಾದಗಳ ಇತ್ಯರ್ಥ.–** (1) ವ್ಯವಸ್ಥೆಯನ್ನು ಏರ್ಪಡಿಸಿರುವವನು, ಸಂದಾಯ ವ್ಯವಸ್ಥೆಯ ನಿರ್ವಹಣೆಗೆ ಸಂಬಂಧಪಟ್ಟ ಯಾವುದೇ ವಿಷಯದ ಸಂಬಂಧದಲ್ಲಿ ವ್ಯವಸ್ಥೆಗೆ ಭಾಗೀದಾರರಾಗಿರುವವರ ನಡುವಣ ವಿವಾದಗಳನ್ನು ತೀರ್ಮಾನಿಸುವುದಕ್ಕಾಗಿ ಆ ವಿವಾದ ವ್ಯವಸ್ಥೆಗೆ ಯಾವ ಭಾಗೀದಾರರು ಪಕ್ಷಕಾರರಲ್ಲವೋ ಅಂಥ ಭಾಗೀದಾರರಲ್ಲಿ ಮೂವರಿಗಿಂತ ಕಡಿಮೆಯಿಲ್ಲದ ಭಾಗೀದಾರರ ತಂಡದ ಪಟ್ಟಿಯನ್ನು ಸಿದ್ಧಪಡಿಸುವುದಕ್ಕೆ ತನ್ನ ನಿಯಮಗಳಲ್ಲಿ ಅಥವಾ ವಿನಿಯಮಗಳಲ್ಲಿ ಉಪಬಂಧವನ್ನು ಕಲ್ಪಿಸತಕ್ಕದ್ದು.

(2) ಸಂದಾಯ ವ್ಯವಸ್ಥೆಯ ನಿರ್ವಹಣೆಗಾಗಿ ಸಂಬಂಧಪಟ್ಟ ಯಾವುದೇ ವಿಷಯದ ಸಂಬಂಧದಲ್ಲಿ ವ್ಯವಸ್ಥೆಗೆ ಭಾಗೀದಾರರ ಪೈಕಿ ಇಬ್ಬರು ಅಥವಾ ಹೆಚ್ಚು ಭಾಗೀದಾರರ ನಡುವೆ ಯಾವುದೇ ವಿವಾದವು ಉದ್ಭವಿಸಿದಲ್ಲಿ, ವ್ಯವಸ್ಥೆ ಏರ್ಪಾಡುದಾರನು ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ತಂಡಕ್ಕೆ ವಿವಾದವನ್ನು ಒಪ್ಪಿಸತಕ್ಕದ್ದು.

(3) ವ್ಯವಸ್ಥೆಗೆ ಭಾಗೀದಾರರಾಗಿರುವವರು ಯಾರೇ ಆಗಿರಲಿ ಆತನ ಮತ್ತು ವ್ಯವಸ್ಥೆ ಏರ್ಪಾಡುದಾರನ ಅಥವಾ ವ್ಯವಸ್ಥೆ ಏರ್ಪಾಡುದಾರರ ನಡುವೆ ಯಾವುದೇ ವಿವಾದ ಉದ್ಭವಿಸಿದಲ್ಲಿ ಅಥವಾ ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ತಂಡದ ತೀರ್ಮಾನದಿಂದ ವ್ಯವಸ್ಥೆಗೆ ಭಾಗೀದಾರರಾದವರ ಪೈಕಿ ಯಾರಿಗಾದರೂ ಸಮಾಧಾನವಾಗದಿದ್ದರೆ, ಆ ವಿವಾದವನ್ನು, ರಿಸರ್ವ್ ಬ್ಯಾಂಕಿಗೆ ಒಪ್ಪಿಸತಕ್ಕದ್ದು.

(4) ಉಪಪ್ರಕರಣ (3)ರ ಮೇರೆಗೆ ನ್ಯಾಯ ನಿರ್ಣಯಕ್ಕಾಗಿ ರಿಸರ್ವ್ ಬ್ಯಾಂಕಿಗೆ ಒಪ್ಪಿಸಿದ ವಿವಾದವನ್ನು, ಈ ಬಗ್ಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಂಡ ರಿಸರ್ವ್ ಬ್ಯಾಂಕಿನ ಅಧಿಕಾರಿಯು ವಿಲೆ ಮಾಡತಕ್ಕದ್ದು ಮತ್ತು ರಿಸರ್ವ್ ಬ್ಯಾಂಕಿನ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು ಮತ್ತು ಅವರು ಅದಕ್ಕೆ ಬದ್ಧರಾಗಿರತಕ್ಕದ್ದು.

(5) ರಿಸರ್ವ್ ಬ್ಯಾಂಕ್ ವ್ಯವಸ್ಥೆ ಏರ್ಪಾಡುದಾರನ ಅಥವಾ ವ್ಯವಸ್ಥೆಗೆ ಭಾಗೀದಾರನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವಾಗ, ರಿಸರ್ವ್ ಬ್ಯಾಂಕಿನ ಮತ್ತು ಇನ್ನೊಬ್ಬ ವ್ಯವಸ್ಥೆ ಏರ್ಪಾಡುದಾರನ ಅಥವಾ ವ್ಯವಸ್ಥೆ ಭಾಗೀದಾರನ ನಡುವೆ ವಿವಾದ ಉದ್ಭವಿಸಿದಲ್ಲಿ, ಆ ವಿಷಯವನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸತಕ್ಕದ್ದು. ಕೇಂದ್ರ ಸರ್ಕಾರವು ಆ ವಿವಾದ ಇತ್ಯರ್ಥಕ್ಕಾಗಿ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯನ್ನು ಅಧಿಕೃತಗೊಳಿಸಬಹುದು ಮತ್ತು ಅಂಥ ಅಧಿಕಾರಿಯ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

**25. ಖಾತೆಯಲ್ಲಿ ನಿಧಿಗಳು ಸಾಕಷ್ಟಿಲ್ಲದಿರುವುದು, ಮುಂತಾದ ಕಾರಣಕ್ಕಾಗಿ ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯನ್ನು ಮಾನ್ಯ ಮಾಡದಿರುವುದು.–** (1) ಒಬ್ಬ ವ್ಯಕ್ತಿಯು, ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಗೆ ಉದ್ಯುಕ್ತನಾದಾಗ, ಅಂಥ ವರ್ಗಾವಣೆಯನ್ನು, ಆ ಖಾತೆಯಲ್ಲಿ ಜಮೆ ಇರುವ ಹಣದ ಮೊಬಲಗು, ವರ್ಗಾವಣೆ ಸೂಚನೆಗಳನ್ನು ಮಾನ್ಯ ಮಾಡಲು ಸಾಕಷ್ಟು ಆಗಿಲ್ಲವೆಂಬ ಅಥವಾ ಆ ಬ್ಯಾಂಕಿನೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಆ ಖಾತೆಯಿಂದ ಸಂದಾಯ ಮಾಡಬೇಕಾದ ಮೊಬಲಗನ್ನು ಅದು ಮೀರುತ್ತದೆ ಎಂಬ ಕಾರಣದ ಮೇಲೆ ಕಾರ್ಯಗತಗೊಳಿಸಲಾಗದಿದ್ದರೆ ಅಂಥ ವ್ಯಕ್ತಿಯು ಅಪರಾಧವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಯಾವುದೇ ಇತರ ಉಪಬಂಧಕ್ಕೆ ಬಾಧಕವಾಗದಂತೆ ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯಾಗಬೇಕಾದ ಮೊಬಲಗಿನ ಮೊತ್ತದ ಎರಡರಷ್ಟಕ್ಕೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ,–

(ಎ) ಯಾವುದೇ ಋಣವನ್ನು ಅಥವಾ ಇತರ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ತೀರಿಸುವುದಕ್ಕಾಗಿ ಮತ್ತೊಬ್ಬ ವ್ಯಕ್ತಿಗೆ ಹಣದ ಯಾವುದೇ ಮೊಬಲಗನ್ನು ಸಂದಾಯ ಮಾಡುವುದಕ್ಕೆ ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯನ್ನು ಮಾಡಲು ಉದ್ಯುಕ್ತನಾಗಿದ್ದ ಹೊರತು;

(ಬಿ) ವ್ಯವಸ್ಥೆ ಏರ್ಪಾಡುದಾರನು ಕೊಟ್ಟ ಸುಸಂಗತ ಪ್ರಕ್ರಿಯಾ ಮಾರ್ಗಸೂಚಿಗಳ ಅನುಸಾರವಾಗಿ ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯನ್ನು ಮಾಡಲು ಉದ್ಯುಕ್ತನಾಗಿದ್ದ ಹೊರತು;

(ಸಿ) ಫಲಾನುಭವಿಯು, ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯನ್ನು ಮಾನ್ಯ ಮಾಡದಿರುವ ಸಂಬಂಧದಲ್ಲಿ, ಸಂಬಂಧಪಟ್ಟ ಬ್ಯಾಂಕಿನಿಂದ ಆತನು ಮಾಹಿತಿಯನ್ನು ಸ್ವೀಕರಿಸಿದ ಮೂವತ್ತು ದಿನಗಳ ಒಳಗೆ ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿ ವರ್ಗಾವಣೆಯನ್ನು ಮಾಡಲು ಉದ್ಯುಕ್ತನಾದ ವ್ಯಕ್ತಿಗೆ ಲಿಖಿತದಲ್ಲಿ ನೋಟೀಸನ್ನು ಕೊಡುವ ಮೂಲಕ ಸದರಿ ಹಣದ ಮೊತ್ತವನ್ನು ಸಂದಾಯ ಮಾಡುವುದಕ್ಕಾಗಿ ತಗಾದೆ ಮಾಡಿದ್ದ ಹೊರತು; ಮತ್ತು

(ಡಿ) ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯನ್ನು ಮಾಡಲು ಉದ್ಯುಕ್ತನಾದ ವ್ಯಕ್ತಿಯು, ಸದರಿ ನೋಟೀಸನ್ನು ಸ್ವೀಕರಿಸಿದ ಹದಿನೈದು ದಿನಗಳ ಒಳಗೆ ಫಲಾನುಭವಿಗೆ ಸದರಿ ಹಣವನ್ನು ಸಂದಾಯ ಮಾಡಲು ತಪ್ಪಿದ್ದ ಹೊರತು

– ಅನ್ವಯವಾಗತಕ್ಕದ್ದಲ್ಲ.

(2) ತದ್ವಿರುದ್ಧವಾದುದು ರುಜುವಾತಾದ ಹೊರತು, ಯಾವುದೇ ಋಣವನ್ನು ಅಥವಾ ಇತರ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ತೀರಿಸುವುದಕ್ಕಾಗಿ ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯನ್ನು ಮಾಡಲು ಉದ್ಯುಕ್ತನಾಗಿದ್ದನೆಂದು ಪೂರ್ವಭಾವನೆ ಮಾಡತಕ್ಕದ್ದು.

(3) ಸೂಚನೆಯ, ಅಧಿಕಾರ ನೀಡಿಕೆಯ, ಆದೇಶದ ಅಥವಾ ಒಪ್ಪಂದದ ಮೂಲಕ ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯನ್ನು ಮಾಡಲು ಉದ್ಯುಕ್ತನಾಗಿದ್ದ ವ್ಯಕ್ತಿಯು, ಅಂಥ ಸೂಚನೆಯ, ಅಧಿಕಾರ ನೀಡಿಕೆಯ, ಆದೇಶದ ಅಥವಾ ಒಪ್ಪಂದದ ಕಾಲದಲ್ಲಿ ಆತನ ಖಾತೆಯಲ್ಲಿ ಜಮೆ ಇರುವ ಹಣವು, ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯನ್ನು ಮಾಡಲು ಸಾಕಷ್ಟಿರಲಿಲ್ಲವೆಂದು ನಂಬಲು ಕಾರಣವಿರಲಿಲ್ಲ ಎಂಬುದು ಉಪಪ್ರಕರಣ (1)ರ ಮೇರೆಗಿನ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್ನಿನಲ್ಲಿ ಪ್ರತಿರಕ್ಷೆಯಾಗಿರತಕ್ಕದ್ದಲ್ಲ.

(4) ನ್ಯಾಯಾಲಯವು, ಈ ಪ್ರಕರಣದ ಮೇರೆಗಿನ ಪ್ರತಿಯೊಂದು ವ್ಯವಹರಣೆಯ ಸಂಬಂಧದಲ್ಲಿ, ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯನ್ನು ಮಾನ್ಯ ಮಾಡದಿರಲು ಸೂಚಿಸುವ ಬ್ಯಾಂಕಿನಿಂದ ಬಂದ ಸಂದೇಶವನ್ನು ಹಾಜರುಪಡಿಸಿದ ಮೇಲೆ ಅಂಥ ಸಂಗತಿಯು ರುಜುವಾತಾಗದ ಹೊರತು ಮತ್ತು ರುಜುವಾತಾಗುವವರೆಗೆ ವಿದ್ಯುನ್ಮಾನ ವ್ಯವಸ್ಥೆ ಮೂಲಕ ಅಂಥ ನಿಧಿಗಳ ವರ್ಗಾವಣೆಯನ್ನು ಮಾನ್ಯ ಮಾಡದಿರುವ ಸಂಗತಿಯನ್ನು ಪೂರ್ವಭಾವನೆ ಮಾಡತಕ್ಕದ್ದು.

(5) ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 (1881ರ 26)ರ ಅಧ್ಯಾಯ–XVIIರ ಉಪಬಂಧಗಳು ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯನ್ನು ಮಾನ್ಯ ಮಾಡದಿರುವುದಕ್ಕೆ ಸಂದರ್ಭ ಸನ್ನಿವೇಶಗಳು ಅವಕಾಶ ಮಾಡಿಕೊಡುವಷ್ಟರ ಮಟ್ಟಿಗೆ ಅನ್ವಯವಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಋಣ ಅಥವಾ ಇತರ ಹೊಣೆಗಾರಿಕೆ" ಎಂದರೆ, ಸಂದರ್ಭಾನುಸಾರ, ಕಾನೂನು ಸಮ್ಮತವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಇತರ ಹೊಣೆಗಾರಿಕೆ.

## ಅಧ್ಯಾಯ VII

## ಅಪರಾಧಗಳು ಮತ್ತು ದಂಡನೆಗಳು

**26. ದಂಡನೆಗಳು.–** (1) ಯಾರೇ ವ್ಯಕ್ತಿಯು, ಪ್ರಕರಣ 4ರ ಉಪಬಂಧಗಳನ್ನು ಉಲ್ಲಂಘನೆ ಮಾಡಿದಲ್ಲಿ ಅಥವಾ ಪ್ರಕರಣ 7ರ ಮೇರೆಗೆ ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಅಧಿಕಾರ ನೀಡಲಾಗಿದೆಯೋ ಆ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಪಾಲಿಸಲು ವಿಫಲನಾದಲ್ಲಿ ಆತನು, ಒಂದು ತಿಂಗಳಿಗಿಂತ ಕಡಿಮೆಯಿರದ ಆದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಕೋಟಿ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಮೊದಲ ಅಪರಾಧ ಆದ ತರುವಾಯ ಅಂಥ ಉಪಬಂಧಗಳನ್ನು ಉಲ್ಲಂಘಿಸುವುದು ಅಥವಾ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಪಾಲಿಸುವಲ್ಲಿ ಆದ ವಿಫಲತೆಯು ಮುಂದುವರಿದ ಪ್ರತಿಯೊಂದು ದಿನಕ್ಕೆ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾರೇ ಆಗಲಿ ಅಧಿಕಾರ ನೀಡಿಕೆಗಾಗಿ ಸಲ್ಲಿಸಿದ ಯಾವುದೇ ಅರ್ಜಿಯಲ್ಲಿ ಅಥವಾ ಈ ಅಧಿನಿಯಮದ ಉಪಬಂಧಗಳಲ್ಲಿ ಯಾವುದೇ ಉಪಬಂಧವು ಅಥವಾ ಅದರ ಮೇರೆಗೆ ಅಥವಾ ಆ ಉಪಬಂಧದ ಉದ್ದೇಶಕ್ಕಾಗಿ ಒದಗಿಸಬೇಕೆಂದು ಅಗತ್ಯಪಡಿಸಿರುವ ಯಾವುದೇ ವಿವರಪಟ್ಟಿಕೆಯಲ್ಲಿ ಅಥವಾ ಇತರ ದಸ್ತಾವೇಜಿನಲ್ಲಿ ಅಥವಾ ಯಾವುದೇ ಮಾಹಿತಿಯಲ್ಲಿ, ಉದ್ದೇಶಪೂರ್ವಕವಾಗಿ ಸುಳ್ಳು ಹೇಳಿಕೆಯನ್ನು, ಯಾವುದೇ ಮಹತ್ವದ ಮುಖ್ಯ ವಿಷಯದಲ್ಲಿ ಅದು ಸುಳ್ಳೆಂದು ಗೊತ್ತಿದ್ದೂ ಕೊಟ್ಟರೆ ಅಥವಾ ಮಹತ್ವದ ಮುಖ್ಯ ಹೇಳಿಕೆಯನ್ನು, ಉದ್ದೇಶಪೂರ್ವಕವಾಗಿ ಕೊಡದಿದ್ದರೆ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಹತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದ ಮತ್ತು ಐವತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಗುರಿಯಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ಪ್ರಕರಣ 12ರ ಮೇರೆಗೆ ಅಥವಾ ಪ್ರಕರಣ 13ರ ಮೇರೆಗೆ ಯಾವ ಹೇಳಿಕೆಯನ್ನು, ಮಾಹಿತಿಯನ್ನು, ವಿವರಪಟ್ಟಿಕೆಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸುವುದು ಅಥವಾ ಯಾವ ಹೇಳಿಕೆಯನ್ನು, ಮಾಹಿತಿಯನ್ನು, ವಿವರ ಪಟ್ಟಿಕೆಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಒದಗಿಸುವುದು ಅವನ ಕರ್ತವ್ಯವಾಗಿದೆಯೋ ಆ ಯಾವುದೇ ಹೇಳಿಕೆಯನ್ನು, ಮಾಹಿತಿಯನ್ನು, ವಿವರಪಟ್ಟಿಕೆಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸಲು ಅಥವಾ ಒದಗಿಸಲು ಅಥವಾ ಪ್ರಕರಣ 14ರ ಮೇರೆಗೆ ಯಾವ ಸಂದಾಯ ವ್ಯವಸ್ಥೆಯನ್ನು ಅಧಿಕಾರಿಯು ತಪಾಸಣೆ ಮಾಡಬೇಕಾಗಿದೆಯೋ ಆ ಸಂದಾಯ ವ್ಯವಸ್ಥೆಯ ನಿರ್ವಹಣೆಗೆ ಸಂಬಂಧಪಟ್ಟಂತೆ ಯಾವುದೇ ಪ್ರಶ್ನೆಗೆ ಉತ್ತರಿಸಲು ವಿಫಲನಾದರೆ, ಅವನು, ಪ್ರತಿಯೊಂದು ಅಪರಾಧದ ಸಂಬಂಧದಲ್ಲಿ ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಅವನು ಉತ್ತರ ಕೊಡದಿರಲು ಪಟ್ಟು ಹಿಡಿದರೆ ಅಂಥ ಅಪರಾಧವು ಮುಂದುವರಿದ ಪ್ರತಿಯೊಂದು ದಿನಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(4) ಯಾರೇ ವ್ಯಕ್ತಿಯು, ಪ್ರಕರಣ 22ರ ಮೇರೆಗೆ ಯಾವ ಮಾಹಿತಿಯನ್ನು ಬಹಿರಂಗಪಡಿಸುವುದನ್ನು ನಿಷೇಧಿಸಲಾಗಿದೆಯೋ ಆ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಿದರೆ, ಅವನು, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ

ಜುಲ್ಮಾನೆಯಿಂದ ಅಥವಾ ಹಾಗೆ ಬಹಿರಂಗಪಡಿಸಿದ ಕಾರ್ಯದಿಂದಾಗಿ ಆದ ಹಾನಿಯ ಮೊಬಲಗಿನ ಎರಡು ಪಟ್ಟಿಗೆ ಸಮನಾದ ಮೊಬಲಗಿನಿಂದ ಇವುಗಳಲ್ಲಿ ಯಾವುದು ಹೆಚ್ಚೋ ಆ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(5) ಈ ಅಧಿನಿಯಮದ ಮೇರೆಗಿನ ನಿರ್ದೇಶನವನ್ನು ರಿಸರ್ವ್‌ಬ್ಯಾಂಕ್ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಥವಾ ರಿಸರ್ವ್ ಬ್ಯಾಂಕ್ ಅಂಥ ಅವಧಿಯನ್ನು ನಿರ್ದಿಷ್ಟಪಡಿಸಿರದಿದ್ದರೆ, ಸಮಂಜಸ ಕಾಲದ ಒಳಗಾಗಿ ಪಾಲಿಸದೆ ಇದ್ದರೆ ಅಥವಾ ಪ್ರಕರಣ 30ರ ಮೇರೆಗೆ ರಿಸರ್ವ್ ಬ್ಯಾಂಕ್ ವಿಧಿಸಿದ ದಂಡನೆಯನ್ನು ಆ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ ಸಂದಾಯ ಮಾಡದಿದ್ದರೆ, ನಿರ್ದೇಶನಗಳನ್ನು ಪಾಲಿಸಲು ಅಥವಾ ಜುಲ್ಮಾನೆಯನ್ನು ಸಂದಾಯ ಮಾಡಲು ವಿಫಲನಾದ ವ್ಯವಸ್ಥೆ ಏರ್ಪಾಡುದಾರನು ಅಥವಾ ವ್ಯವಸ್ಥೆಗೆ ಭಾಗೀದಾರನು ಒಂದು ತಿಂಗಳಿಗಿಂತ ಕಡಿಮೆ ಇರದ ಆದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಕೋಟಿ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಅಂಥ ನಿರ್ದೇಶನವನ್ನು ಪಾಲಿಸಲು ತಪ್ಪುವುದು ಮುಂದುವರಿದರೆ, ಮೊದಲ ಅಪರಾಧದ ನಂತರ ಹಾಗೆ ಮುಂದುವರೆದ ಪ್ರತಿಯೊಂದು ದಿನಕ್ಕೆ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(6) ಯಾರೇ ವ್ಯಕ್ತಿಯು, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘನೆ ಮಾಡಿದರೆ ಅಥವಾ ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ವಿನಿಯಮದಲ್ಲಿ ಅಥವಾ ಅದರ ಮೇರೆಗೆ ಮಾಡಿದ ಆದೇಶದಲ್ಲಿ ಅಥವಾ ನೀಡಿದ ನಿರ್ದೇಶನದಲ್ಲಿ ಇರುವ ಯಾವುದೇ ಅಗತ್ಯತೆಯನ್ನು ಅಥವಾ ವಿಧಿಸಿದ ಷರತ್ತನ್ನು ಪಾಲಿಸುವಲ್ಲಿ ಯಾವುದೇ ತಪ್ಪು ಮಾಡಿದರೆ, ಅಂಥ ಉಲ್ಲಂಘನೆಗೆ ಅಥವಾ ತಪ್ಪಿಗೆ ಯಾವುದೇ ದಂಡನೆಯನ್ನು ನಿರ್ದಿಷ್ಟಪಡಿಸಿರದಿದ್ದರೆ, ಸಂದರ್ಭಾನುಸಾರ ಅಂಥ ಉಲ್ಲಂಘನೆಯನ್ನು ಅಥವಾ ತಪ್ಪನ್ನು ಮಾಡಿದ ವ್ಯಕ್ತಿಯು ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಅಂಥ ಉಲ್ಲಂಘನೆಯು ಅಥವಾ ತಪ್ಪು ಮುಂದುವರಿದರೆ ಮೊದಲ ಅಪರಾಧದ ನಂತರ, ಅಂಥ ಉಲ್ಲಂಘನೆಯು ಅಥವಾ ತಪ್ಪು ಮುಂದುವರೆದ ಪ್ರತಿಯೊಂದು ದಿನಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**27. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಉಪಬಂಧಗಳಲ್ಲಿ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ವಿನಿಯಮವನ್ನು, ನೀಡಿದ ನಿರ್ದೇಶನವನ್ನು ಅಥವಾ ಮಾಡಿದ ಆದೇಶವನ್ನು ಉಲ್ಲಂಘಿಸಿರುವ ವ್ಯಕ್ತಿಯು ಕಂಪನಿಯಾಗಿದ್ದರೆ ಹಾಗೆ ಉಲ್ಲಂಘನೆ ಮಾಡಿದ ಕಾಲದಲ್ಲಿ, ಕಂಪನಿಯ ವ್ಯವಹಾರದ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳಿಗೆ, ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಯಲು ತಾನು ಯಥೋಚಿತವಾದ ಎಲ್ಲ ಎಚ್ಚರಿಕೆ ವಹಿಸಿದ್ದೆನೆಂದು, ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ವಿನಿಯಮದ, ಯಾವುದೇ ಉಪಬಂಧವನ್ನು, ನೀಡಿದ ನಿರ್ದೇಶನವನ್ನು ಅಥವಾ ಆದೇಶವನ್ನು ಕಂಪನಿಯು

ಉಲ್ಲಂಘಿಸಿದ್ದರೆ ಮತ್ತು ಅಂಥ ಉಲ್ಲಂಘನೆಯು, ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ, ಆ ಉಲ್ಲಂಘನೆಯ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ 'ನಿರ್ದೇಶಕ' ಎಂದರೆ ಫರ್ಮಿನ ಪಾಲುದಾರ.

**28. ಅಪರಾಧಗಳ ಸಂಜ್ಞಾನ.–** (1) ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು, ಈ ಬಗ್ಗೆ ರಿಸರ್ವ್ ಬ್ಯಾಂಕ್ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಲಿಖಿತದಲ್ಲಿ ಅಧಿಕೃತಗೊಳಿಸಿದ ತನ್ನ ಅಧಿಕಾರಿಯು ದೂರನ್ನು ಸಲ್ಲಿಸಿದ ಹೊರತು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟರ ಅಥವಾ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಆಫ್ ಫಸ್ಟ್ ಕ್ಲಾಸ್ ನ್ಯಾಯಾಲಯಕ್ಕಿಂತಲೂ ಕೆಳದರ್ಜೆಯ ಯಾವುದೇ ನ್ಯಾಯಾಲಯವು ಅಂಥ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕದ್ದಲ್ಲ:

ಪರಂತು, ನ್ಯಾಯಾಲಯವು, ಪ್ರಕರಣ 25ರ ಮೇರೆಗೆ ದಂಡನೀಯವಾದ ಅಪರಾಧವನ್ನು ವಿದ್ಯುನ್ಮಾನ ವ್ಯವಸ್ಥೆ ಮೂಲಕ ನಿಧಿಗಳ ವರ್ಗಾವಣೆಯನ್ನು ಮಾನ್ಯ ಮಾಡದಿರುವುದರಿಂದ ಬಾಧಿತನಾದ ವ್ಯಕ್ತಿಯು ಲಿಖಿತದಲ್ಲಿ ದೂರನ್ನು ಸಲ್ಲಿಸಿದಾಗ ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

(2) ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2) ರಲ್ಲಿ ಏನೇ ಒಳಗೊಂಡಿದ್ದರೂ, ಮ್ಯಾಜಿಸ್ಟ್ರೇಟನು, ದೂರನ್ನು ದಾಖಲು ಮಾಡಿದ ರಿಸರ್ವ್ ಬ್ಯಾಂಕಿನ ಅಧಿಕಾರಿಯು ಖುದ್ದಾಗಿ ಹಾಜರಾಗುವುದಕ್ಕೆ ವಿನಾಯಿತಿ ಕೊಡಬಹುದು, ಆದರೆ, ಮ್ಯಾಜಿಸ್ಟ್ರೇಟನು, ತನ್ನ ವಿವೇಚನೆಗೆ ಅನುಸಾರವಾಗಿ, ವ್ಯವಹರಣೆಗಳ ಯಾವುದೇ ಹಂತದಲ್ಲಿ, ಫಿರ್ಯಾದಿಯು ಖುದ್ದಾಗಿ ಹಾಜರಾಗುವಂತೆ ನಿರ್ದೇಶನ ನೀಡಬಹುದು.

**29. ಜುಲ್ಮಾನೆ ಹಣದ ಬಳಕೆ.–** ಈ ಅಧಿನಿಯಮದ ಮೇರೆಗಿನ ಯಾವುದೇ ಜುಲ್ಮಾನೆಯನ್ನು ವಿಧಿಸುವ ನ್ಯಾಯಾಲಯವು, ಅದನ್ನು ಇಡಿಯಾಗಿ ಅಥವಾ ಅದರ ಯಾವುದೇ ಭಾಗವನ್ನು ವ್ಯವಹರಣೆಗಳ ವೆಚ್ಚಗಳಿಗಾಗಿ ಅಥವಾ ಅಂಥ ವೆಚ್ಚಗಳ ಸಂದಾಯಕ್ಕಾಗಿ ಬಳಕೆಮಾಡಬಹುದೆಂದು ನಿರ್ದೇಶನ ನೀಡಬಹುದು.

**30. ಜುಲ್ಮಾನೆಯನ್ನು ವಿಧಿಸಲು ರಿಸರ್ವ್ ಬ್ಯಾಂಕಿನ ಅಧಿಕಾರ.–** (1) ಪ್ರಕರಣ 26ರಲ್ಲಿ ಏನೇ ಒಳಗೊಂಡಿದ್ದರೂ, ಪ್ರಕರಣ 26ರ ಉಪಪ್ರಕರಣ (2)ರಲ್ಲಿ ಅಥವಾ ಸಂದರ್ಭಾನುಸಾರ ಉಪಪ್ರಕರಣ (6)ರಲ್ಲಿ ಉಲ್ಲೇಖಿಸಿದ ಸ್ವರೂಪದ ಉಲ್ಲಂಘನೆಯಾಗಿದ್ದರೆ ಅಥವಾ ತಪ್ಪು ಆಗಿದ್ದರೆ, ರಿಸರ್ವ್ ಬ್ಯಾಂಕು, ಅಂಥ ಉಲ್ಲಂಘನೆಯನ್ನು ಅಥವಾ ತಪ್ಪನ್ನು ಎಸಗಿದ ವ್ಯಕ್ತಿಗೆ, ಐದು ಲಕ್ಷ ರೂಪಾಯಿಗಳನ್ನು ಮೀರದಷ್ಟು ಅಥವಾ ಅಂಥ ಉಲ್ಲಂಘನೆಯಲ್ಲಿ ಅಥವಾ ತಪ್ಪಿನಲ್ಲಿ ಒಳಗೊಂಡ ಮೊಬಲಗಿನ ಎರಡರಷ್ಟನ್ನು, ಅಂಥ ಮೊಬಲಗು ಎಷ್ಟೆಂದು ನಿರ್ಧರಣೆ ಮಾಡಬಹುದಾಗಿದ್ದರೆ ಅಷ್ಟನ್ನು ಮೀರಿದ ಮೊಬಲಗನ್ನು

ಇವುಗಳಲ್ಲಿ ಯಾವುದು ಹೆಚ್ಚೋ ಅಷ್ಟು ಮೊಬಲಗಿನ ದಂಡವನ್ನು ವಿಧಿಸಬಹುದು ಮತ್ತು ಮೊದಲ ಅಪರಾಧದ ತರುವಾಯ ಅಂಥ ಉಲ್ಲಂಘನೆ ಅಥವಾ ತಪ್ಪು ಮುಂದುವರಿದಲ್ಲಿ ಅಂಥ ಉಲ್ಲಂಘನೆ ಅಥವಾ ತಪ್ಪು ಮುಂದುವರೆದ ಪ್ರತಿಯೊಂದು ದಿವಸಕ್ಕೆ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ದಂಡವನ್ನು ವಿಧಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ದಂಡವನ್ನು ವಿಧಿಸುವ ಉದ್ದೇಶಕ್ಕಾಗಿ, ರಿಸರ್ವ್ ಬ್ಯಾಂಕು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ದಂಡವಾಗಿ ಏಕೆ ವಿಧಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ಸುಸ್ತಿದಾರನನ್ನು ಅಗತ್ಯಪಡಿಸಿ ನೋಟೀಸನ್ನು ಜಾರಿಮಾಡತಕ್ಕದ್ದು ಮತ್ತು ಅಂಥ ಸುಸ್ತಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಸಹ ಕೊಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ರಿಸರ್ವ್ ಬ್ಯಾಂಕು ವಿಧಿಸಿದ ಯಾವುದೇ ದಂಡವನ್ನು, ಮೊಬಲಗಿನ ಸಂದಾಯಕ್ಕೆ ತಗಾದೆ ಮಾಡಿ ರಿಸರ್ವ್ ಬ್ಯಾಂಕು ನೀಡಿದ ನೋಟೀಸನ್ನು ಯಾವ ದಿನಾಂಕದಂದು ಸುಸ್ತಿದಾರನಿಗೆ ಜಾರಿ ಮಾಡಲಾಯಿತೋ ಆ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ ಸಂದಾಯ ಮಾಡತಕ್ಕದ್ದು ಮತ್ತು ಅಂಥ ಅವಧಿಯ ಒಳಗೆ ಮೊಬಲಗನ್ನು ಸಂದಾಯ ಮಾಡಲು ವ್ಯಕ್ತಿಯು ತಪ್ಪಿದ ಸಂದರ್ಭದಲ್ಲಿ, ಸುಸ್ತಿದಾರ ಕಂಪನಿಯ ಅಥವಾ ನೋಂದಾಯಿತ ಕಚೇರಿಯು ಇರುವ ಅಥವಾ ಆ ವ್ಯಕ್ತಿಯ ಅಧಿಕೃತ ವ್ಯವಹಾರವು ನಡೆಯುತ್ತಿರುವ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ಪ್ರಧಾನ ಸಿವಿಲ್ ನ್ಯಾಯಾಲಯವು ಮಾಡಿದ ನಿರ್ದೇಶನದ ಮೇಲೆ ವಸೂಲಿ ಮಾಡಬಹುದು:

ಪರಂತು, ಅಂಥ ನಿರ್ದೇಶನವನ್ನು, ಈ ಸಂಬಂಧದಲ್ಲಿ ರಿಸರ್ವ್ ಬ್ಯಾಂಕ್ ಅಧಿಕೃತಗೊಳಿಸಿದ ಅಧಿಕಾರಿಯು ಸಲ್ಲಿಸಿದ ಅರ್ಜಿಯ ಮೇಲೆ ಹೊರತು ನೀಡತಕ್ಕದ್ದಲ್ಲ.

(4) ರಿಸರ್ವ್ ಬ್ಯಾಂಕ್, ಸುಸ್ತಿದಾರನ ಚಾಲ್ತಿ ಖಾತೆ ಯಾವುದಾದರೂ ಇದ್ದರೆ, ಆ ಖಾತೆಗೆ ಖರ್ಚು ಹಾಕುವ ಮೂಲಕ ಅಥವಾ ಸುಸ್ತಿದಾರನ ಲೆಕ್ಕದಲ್ಲಿರುವ ಭದ್ರತಾಪತ್ರಗಳನ್ನು ಹಣಕ್ಕೆ ಮಾರ್ಪಡಿಸುವ ಮೂಲಕ ಅಥವಾ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ದಂಡದ ಮೊಬಲಗನ್ನು ವಸೂಲು ಮಾಡಬಹುದು.

(5) ಉಪಪ್ರಕರಣ (3)ರ ಮೇರೆಗೆ ನಿರ್ದೇಶನ ನೀಡುವ ನ್ಯಾಯಾಲಯವು, ಸುಸ್ತಿದಾರನು ಸಂದಾಯ ಮಾಡಬೇಕಾದ ಮೊಬಲಗನ್ನು ನಿರ್ದಿಷ್ಟಪಡಿಸಿ ಪ್ರಮಾಣಪತ್ರವನ್ನು ನೀಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ಪ್ರಮಾಣಪತ್ರವನ್ನು, ಸಿವಿಲ್ ದಾವೆಯಲ್ಲಿ ನ್ಯಾಯಾಲಯವು ಮಾಡಿದ ಡಿಕ್ರಿಯಂತೆ ಅದೇ ರೀತಿಯಲ್ಲಿ ಜಾರಿಗೊಳಿಸಬಹುದಾದದು ಆಗಿರತಕ್ಕದ್ದು.

(6) ಯಾವುದೇ ಫಿರ್ಯಾದನ್ನು, ಪ್ರಕರಣ 26ರ ಉಪಪ್ರಕರಣ (2)ರಲ್ಲಿ ಅಥವಾ ಸಂದರ್ಭಾನುಸಾರ ಉಪಪ್ರಕರಣ (4)ರಲ್ಲಿ ಉಲ್ಲೇಖಿಸಿದ ಸ್ವರೂಪದ ಉಲ್ಲಂಘನೆಯ ಅಥವಾ ಸುಸ್ತಿಯ ಸಂಬಂಧದಲ್ಲಿ ಯಾವುದೇ ನ್ಯಾಯಾಲಯದಲ್ಲಿ ಯಾರೇ ವ್ಯಕ್ತಿಯ ವಿರುದ್ಧ ಸಲ್ಲಿಸಿರುವಲ್ಲಿ, ಆಗ, ಆ ವ್ಯಕ್ತಿಯ ಮೇಲೆ ಯಾವುದೇ ದಂಡವನ್ನು ವಿಧಿಸುವುದಕ್ಕಾಗಿ ವ್ಯವಹರಣೆಯನ್ನು, ಈ ಪ್ರಕರಣದ ಮೇರೆಗೆ ಕೈಗೊಳ್ಳತಕ್ಕದ್ದಲ್ಲ.

**31. ಅಪರಾಧಗಳ ಬಗ್ಗೆ ರಾಜಿ ಮಾಡಿಕೊಳ್ಳಲು ಅಧಿಕಾರ.–** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಒಳಗೊಂಡಿದ್ದರೂ, ಕಾರಾವಾಸದಿಂದ ಮಾತ್ರವೇ ಅಥವಾ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡನೀಯವಾದ ಅಪರಾಧವಾಗಿರದ, ಯಾವುದೇ ಉಲ್ಲಂಘನೆಗಾಗಿ ಈ ಅಧಿನಿಯಮದ ಮೇರೆಗೆ ದಂಡನೀಯವಾದ

ಯಾವುದೇ ಅಪರಾಧದ ಬಗ್ಗೆ ಅಂಥ ಉಲ್ಲಂಘನೆಯನ್ನು ಮಾಡುವ ವ್ಯಕ್ತಿಯಿಂದ ಯಾವುದೇ ವ್ಯವಹರಣೆಯನ್ನು ಪ್ರಾರಂಭಿಸುವ ಮುಂಚೆಯಾಗಲಿ ಅಥವಾ ತರುವಾಯವಾಗಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಈ ಬಗ್ಗೆ ಯುಕ್ತವಾಗಿ ಅಧಿಕಾರ ಪಡೆದ ರಿಸರ್ವ್ ಬ್ಯಾಂಕಿನ ಅಧಿಕಾರಿಯು ರಾಜಿ ಮಾಡಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಉಲ್ಲಂಘನೆಯ ಬಗ್ಗೆ ರಾಜಿಯಾಗಿದ್ದಲ್ಲಿ, ಯಾವುದೇ ವ್ಯವಹರಣೆಯನ್ನು ಅಥವಾ ಸಂದರ್ಭಾನುಸಾರ, ಹೆಚ್ಚಿನ ವ್ಯವಹರಣೆಯನ್ನು, ಆ ಪ್ರಕರಣದ ಮೇರೆಗೆ ಅಂಥ ಉಲ್ಲಂಘನೆಯನ್ನು ಮಾಡಿದ ವ್ಯಕ್ತಿಯ ವಿರುದ್ಧವಾಗಿ, ಹಾಗೆ ರಾಜಿ ಮಾಡಿಕೊಂಡ ಉಲ್ಲಂಘನೆಯ ಸಂಬಂಧದಲ್ಲಿ ಸಂದರ್ಭಾನುಸಾರ ಪ್ರಾರಂಭಿಸತಕ್ಕದ್ದಲ್ಲ ಅಥವಾ ಮುಂದುವರೆಸತಕ್ಕದ್ದಲ್ಲ.

## ಅಧ್ಯಾಯ VIII

### ಸಂಕೀರ್ಣ

**32. ಈ ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅವುಗಳಿಗೆ ಅಸಂಗತವಾದುದು ಏನೇ ಒಳಗೊಂಡಿದ್ದರೂ, ಪರಿಣಾಮಕಾರಿಯಾಗಿರತಕ್ಕದ್ದು.

**33. ದಂಡವನ್ನು ವಸೂಲು ಮಾಡುವ ವಿಧಾನ.–** (1) ಪ್ರಕರಣ 30ರ ಮೇರೆಗೆ ರಿಸರ್ವ್ ಬ್ಯಾಂಕ್ ಸುಸ್ತಿದಾರನ ಮೇಲೆ ವಿಧಿಸಿದ ದಂಡವನ್ನು, ಯಾವುದೇ ಮೊಬಲಗು ಯಾವ ವ್ಯಕ್ತಿಯಿಂದ ಸುಸ್ತಿದಾರನಿಗೆ ಬಾಕಿಯಿರುವುದೋ ಆ ಯಾರೇ ವ್ಯಕ್ತಿಯು ಸುಸ್ತಿದಾರನಿಗೆ ಸಂದಾಯ ಮಾಡಬೇಕಾದ ಮೊಬಲಗಿನಿಂದ, ರಿಸರ್ವ್ ಬ್ಯಾಂಕಿಗೆ ದಂಡವಾಗಿ ಕೊಡಬೇಕಾದ ಮೊಬಲಗನ್ನು ಕಡಿತ ಮಾಡುವಂತೆ ಮತ್ತು ರಿಸರ್ವ್ ಬ್ಯಾಂಕಿಗೆ ಸಂದಾಯ ಮಾಡುವಂತೆ ಅಗತ್ಯಪಡಿಸುವ ನೋಟೀಸನ್ನು ಆ ವ್ಯಕ್ತಿಗೆ ನೀಡುವ ಮೂಲಕ ವಸೂಲಿ ಮಾಡತಕ್ಕದ್ದು.

(2) ಈ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಈ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ನೋಟೀಸನ್ನು ಕೊಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ಅಂಥ ನೋಟೀಸನ್ನು ಪಾಲಿಸಲು ಬದ್ಧನಾಗಿರತಕ್ಕದ್ದು ಮತ್ತು ನಿರ್ದಿಷ್ಟವಾಗಿ, ಅಂಥ ನೋಟೀಸನ್ನು ಅಂಚೆ ಕಚೇರಿಗೆ, ಬ್ಯಾಂಕಿಗೆ ಅಥವಾ ವಿಮಾ ಸಂಸ್ಥೆಗೆ ಕೊಟ್ಟಿರುವಲ್ಲಿ ಯಾವುದೇ ನಿಯಮದಲ್ಲಿ, ಪದ್ಧತಿಯಲ್ಲಿ ಅಥವಾ ಅಗತ್ಯತೆಯಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಸಂದಾಯ ಮಾಡುವ ಮುಂಚೆ ಯಾವುದೇ ನಮೂದನ್ನು, ಹಿಂಬರಹವನ್ನು ಅಥವಾ ಅದೇ ಬಗೆಯದನ್ನು ಮಾಡುವ ಉದ್ದೇಶಕ್ಕಾಗಿ ಯಾವುದೇ ಪಾಸ್‌ಬುಕ್ ಅನ್ನು, ಠೇವಣಿ ರಸೀದಿಯನ್ನು, ಪಾಲಿಸಿಯನ್ನು ಅಥವಾ ಯಾವುದೇ ಇತರೆ ದಸ್ತಾವೇಜನ್ನು ಹಾಜರುಪಡಿಸುವುದು ಅಗತ್ಯವಾಗಿರತಕ್ಕದ್ದಲ್ಲ.

(3) ಈ ಉಪಪ್ರಕರಣದ ಮೇರೆಗೆ ಯಾವ ಸ್ವತ್ತಿನ ಸಂಬಂಧದಲ್ಲಿ ನೋಟೀಸನ್ನು ಕೊಡಲಾಗಿದೆಯೋ ಆ ಸ್ವತ್ತಿಗೆ ಸಂಬಂಧಪಟ್ಟಂತೆ ನೋಟೀಸಿನ ದಿನಾಂಕದ ತರುವಾಯ ಉದ್ಭವಿಸುವ ಯಾವುದೇ ಕ್ಲೇಮು, ನೋಟೀಸಿನಲ್ಲಿ ಒಳಗೊಂಡ ಯಾವುದೇ ತಗಾದೆಗೆ ಸಂಬಂಧಿಸಿದಂತೆ ಅನೂರ್ಜಿತವಾಗತಕ್ಕದ್ದು.

(4) ಈ ಉಪಪ್ರಕರಣದ ಮೇರೆಗೆ ಯಾರಿಗೆ ನೋಟೀಸನ್ನು ಕಳುಹಿಸಲಾಗಿದೆಯೋ ಆ ವ್ಯಕ್ತಿಯು, ತಗಾದೆ ಮಾಡಿದ ಮೊಬಲಗು ಅಥವಾ ಅದರ ಯಾವುದೇ ಭಾಗವು ಸುಸ್ತಿದಾರನಿಗೆ ಬಾಕಿಯಾಗಿರುವುದಿಲ್ಲ ಅಥವಾ ಸುಸ್ತಿದಾರನ

ಪರವಾಗಿ ಅಥವಾ ಅವನ ಬಾಬ್ತು ತಾನು ಯಾವುದೇ ಹಣವನ್ನು ಧಾರಣ ಮಾಡಿರುವುದಿಲ್ಲವೆಂದು ಪ್ರಮಾಣ ಮಾಡಿ ಹೇಳಿಕೆಯನ್ನು ನೀಡುವ ಮೂಲಕ ಆಕ್ಷೇಪಿಸಿದರೆ, ಆಗ ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಅಂಥ ಯಾವುದೇ ಮೊಬಲಗನ್ನು ಅಥವಾ ಸಂದರ್ಭಾನುಸಾರ ಅದರ ಯಾವುದೇ ಭಾಗವನ್ನು ಸಂದಾಯ ಮಾಡಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸುತ್ತದೆಂದು ಭಾವಿಸತಕ್ಕದ್ದಲ್ಲ, ಆದರೆ, ಯಾವುದೇ ಮುಖ್ಯ ವಿವರದಲ್ಲಿ ಅಂಥ ಹೇಳಿಕೆಯು ಸುಳ್ಳೆಂದು ಕಂಡುಬಂದರೆ, ನೋಟೀಸಿನ ದಿನಾಂಕದಂದು ಸುಸ್ತಿದಾರನಿಗೆ ತಾನು ಸ್ವತಃ ಹೊಣೆಯಾಗಿರುವಷ್ಟರ ಮಟ್ಟಿಗೆ ಅಥವಾ ರಿಸರ್ವ್ ಬ್ಯಾಂಕು ಸುಸ್ತಿದಾರನಿಗೆ ವಿಧಿಸಿದ ದಂಡದಷ್ಟರ ಮಟ್ಟಿಗೆ ಇದರಲ್ಲಿ ಯಾವುದು ಕಡಿಮೆಯೋ ಅಷ್ಟರ ಮಟ್ಟಿಗೆ ಅಂಥ ವ್ಯಕ್ತಿಯು ರಿಸರ್ವ್ ಬ್ಯಾಂಕಿಗೆ ವೈಯಕ್ತಿಕವಾಗಿ ಹೊಣೆಗಾರನಾಗತಕ್ಕದ್ದು.

(5) ರಿಸರ್ವ್ ಬ್ಯಾಂಕು, ಯಾವುದೇ ಕಾಲದಲ್ಲಿ ಅಥವಾ ಕಾಲಕಾಲಕ್ಕೆ, ಈ ಪ್ರಕರಣದ ಮೇರೆಗೆ ನೀಡಿದ ಯಾವುದೇ ನೋಟೀಸನ್ನು ತಿದ್ದುಪಡಿ ಮಾಡಬಹುದು ಅಥವಾ ಅದನ್ನು ರದ್ದುಗೊಳಿಸಬಹುದು ಅಥವಾ ಅಂಥ ನೋಟೀಸಿಗೆ ಅನುಸಾರವಾಗಿ ಸಂದಾಯವನ್ನು ಮಾಡುವುದಕ್ಕಾಗಿ ಕಾಲವನ್ನು ವಿಸ್ತರಣೆ ಮಾಡಬಹುದು.

(6) ರಿಸರ್ವ್ ಬ್ಯಾಂಕು, ಈ ಪ್ರಕರಣದ ಮೇರೆಗೆ ನೀಡಿದ ನೋಟೀಸನ್ನು ಪಾಲಿಸಿ ತನಗೆ ಸಂದಾಯ ಮಾಡಿದ ಯಾವುದೇ ಮೊಬಲಗಿಗೆ ರಸೀದಿಯನ್ನು ಕೊಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದ ವ್ಯಕ್ತಿಯು, ಸುಸ್ತಿದಾರನಿಗೆ ಸಂಬಂಧಿಸಿದಂತೆ ತನಗಿರುವ ಹೊಣೆಗಾರಿಕೆಯಿಂದ ಹಾಗೆ ಸಂದಾಯ ಮಾಡಿದ ಮೊಬಲಗಿನಷ್ಟರ ಮಟ್ಟಿಗೆ ಸಂಪೂರ್ಣವಾಗಿ ವಿಮೋಚಿತನಾಗತಕ್ಕದ್ದು.

(7) ಈ ಪ್ರಕರಣದ ಮೇರೆಗೆ ನೋಟೀಸನ್ನು ಸ್ವೀಕರಿಸಿದ ತರುವಾಯ ಸುಸ್ತಿದಾರನಿಗೆ ಸಂಬಂಧಿಸಿದಂತೆ ತನಗಿರುವ ಯಾವುದೇ ಹೊಣೆಗಾರಿಕೆಯಿಂದ ವಿಮೋಚನೆಗೊಳ್ಳುವ ಯಾರೇ ವ್ಯಕ್ತಿಯು, ಸುಸ್ತಿದಾರನಿಗೆ ಸಂಬಂಧಿಸಿದಂತೆ ಹಾಗೆ ವಿಮೋಚನೆಗೊಂಡ ತನ್ನ ಹೊಣೆಗಾರಿಕೆಯಷ್ಟರ ಮಟ್ಟಿಗೆ ಅಥವಾ ರಿಸರ್ವ್ ಬ್ಯಾಂಕು ಸುಸ್ತಿದಾರನಿಗೆ ವಿಧಿಸಿದ ದಂಡದಷ್ಟರ ಮಟ್ಟಿಗೆ ಇದರಲ್ಲಿ ಯಾವುದು ಕಡಿಮೆಯೋ ಅಷ್ಟರಮಟ್ಟಿಗೆ ರಿಸರ್ವ್ ಬ್ಯಾಂಕಿಗೆ ವೈಯಕ್ತಿಕವಾಗಿ ಹೊಣೆಗಾರನಾಗಿರತಕ್ಕದ್ದು.

(8) ಈ ಪ್ರಕರಣದ ಮೇರೆಗೆ ನೋಟೀಸನ್ನು ಯಾರಿಗೆ ಕಳುಹಿಸಲಾಗಿದೆಯೋ ಆ ವ್ಯಕ್ತಿಯು, ಅದಕ್ಕೆ ಅನುಸಾರವಾಗಿ ರಿಸರ್ವ್ ಬ್ಯಾಂಕಿಗೆ ಸಂದಾಯ ಮಾಡಲು ತಪ್ಪಿದರೆ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮೊಬಲಗಿನ ಸಂಬಂಧದಲ್ಲಿ ಅವನನ್ನು ಸುಸ್ತಿದಾರ ಎಂದು ಭಾವಿಸತಕ್ಕದ್ದು ಮತ್ತು ಅವನಿಂದ ಬರಬೇಕಾದ ಮೊಬಲಗು ಬಾಕಿ ಆಗಿದಿದ್ದರೆ, ಹೇಗೊ ಹಾಗೆ ಈ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ವಸೂಲು ಮಾಡುವುದಕ್ಕಾಗಿ ಮುಂದಿನ ವ್ಯವಹರಣೆಗಳನ್ನು ಅವನ ವಿರುದ್ಧ ಕೈಗೊಳ್ಳತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ "ಸುಸ್ತಿದಾರ" ಎಂದರೆ, ರಿಸರ್ವ್ ಬ್ಯಾಂಕ್ 30ನೇ ಪ್ರಕರಣದ ಮೇರೆಗೆ ಯಾರ ಮೇಲೆ ರಿಸರ್ವ್ ಬ್ಯಾಂಕ್ ದಂಡವನ್ನು ವಿಧಿಸಿದೆಯೋ ಆ ಯಾರೇ ವ್ಯಕ್ತಿ ಅಥವಾ ವ್ಯವಸ್ಥೆ ಏರ್ಪಾಡುದಾರನು ಅಥವಾ ವ್ಯವಸ್ಥೆಗೆ ಭಾಗೀದಾರನು.

**34. ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಅಥವಾ ಸ್ಟಾಕ್ ಎಕ್ಸ್‌ಚೇಂಜ್‌ಗಳ ಕ್ಲಿಯರಿಂಗ್ ಕಾರ್ಪೋರೇಷನ್‌ಗಳಿಗೆ ಈ ಅಧಿನಿಯಮವು ಅನ್ವಯವಾಗದಿರುವುದು.–** ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಯಾವುದೂ, ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಅಥವಾ ಸ್ಟಾಕ್ ಎಕ್ಸ್‌ಚೇಂಜ್‌ಗಳ ಕ್ಲಿಯರಿಂಗ್ ಕಾರ್ಪೋರೇಷನ್‌ಗಳಿಗೆ ಅನ್ವಯವಾಗತಕ್ಕದ್ದಲ್ಲ.

**34ಎ. ಈ ಅಧಿನಿಯಮವು ಗೊತ್ತುಪಡಿಸಲಾದ ವ್ಯಾಪಾರ ಭಂಡಾರಿಗೆ ಮತ್ತು ನೀಡಿಕೆದಾರನಿಗೆ ಅನ್ವಯವಾಗುವುದು.–** (1) ಈ ಅಧಿನಿಯಮದ ಉಪಬಂಧಗಳು, ಗೊತ್ತುಪಡಿಸಿದ ವ್ಯಾಪಾರ ಭಂಡಾರಿಗೆ ಅಥವಾ ನೀಡಿಕೆದಾರನಿಗೆ, ಅಥವಾ ಅವರಿಗೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದು. ಹಾಗೆ ಅವು.–

(ಎ) "ಸಂದಾಯ ವ್ಯವಸ್ಥೆ" ಗೆ ಅಥವಾ "ವ್ಯವಸ್ಥೆ ಏರ್ಪಾಡುದಾರ" ನಿಗೆ ಮಾಡಿದ ಉಲ್ಲೇಖಗಳನ್ನು, "ಗೊತ್ತುಪಡಿಸಿದ ವ್ಯಾಪಾರ ಭಂಡಾರಿಗೆ" ಅಥವಾ ಸಂದರ್ಭಾನುಸಾರ "ನೀಡಿಕೆದಾರ" ನಿಗೆ ಮಾಡಿದ ಉಲ್ಲೇಖಗಳೆಂದು ಅರ್ಥಾನ್ವಯ ಮಾಡತಕ್ಕದ್ದೆಂದು;

(ಬಿ) "ಈ ಅಧಿನಿಯಮದ ಪ್ರಾರಂಭ" ದ ಬಗ್ಗೆ ಮಾಡಿದ ಉಲ್ಲೇಖಗಳನ್ನು,–

(i) ಗೊತ್ತುಪಡಿಸಿದ ವ್ಯಾಪಾರ ಭಂಡಾರಿಗೆ ಮಾಡಿದ ಉಲ್ಲೇಖಗಳನ್ನು, ಯಾವ ದಿನಾಂಕದಂದು ವ್ಯಾಪಾರ ಭಂಡಾರಿಯನ್ನು ರಿಸರ್ವ್ ಬ್ಯಾಂಕು ಗೊತ್ತುಪಡಿಸಿದ ವ್ಯಾಪಾರ ಭಂಡಾರಿಯೆಂದು ನಿರ್ದಿಷ್ಟಪಡಿಸಿತೋ ಆ ದಿನಾಂಕದಂದು ಮಾಡಿದ ಉಲ್ಲೇಖಗಳೆಂದು; ಮತ್ತು

(ii) ನೀಡಿಕೆದಾರನಿಗೆ ಮಾಡಿದ ಉಲ್ಲೇಖಗಳನ್ನು ಸಂದಾಯ ಮತ್ತು ಇತ್ಯರ್ಥ ವ್ಯವಸ್ಥೆ (ತಿದ್ದುಪಡಿ) ಅಧಿನಿಯಮ, 2015 (2015 ರ 18) ರ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳೆಂದು

– ಅರ್ಥಾನ್ವಯ ಮಾಡತಕ್ಕದ್ದೆಂದು ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು ಈ ಇಡೀ ಅಧಿನಿಯಮದಲ್ಲಿ ಸಂದಾಯ ವ್ಯವಸ್ಥೆಗಳಿಗೆ ಅಥವಾ ಅವುಗಳಿಗೆ ಸಂಬಂಧಪಟ್ಟಂತೆ ಹೇಗೆ ಅನ್ವಯವಾಗುತ್ತವೆಯೋ ಹಾಗೆಯೇ ಸಾಧ್ಯವಾದಷ್ಟು ಮಟ್ಟಿಗೆ ಮಾರ್ಪಾಟಿಗೊಳಪಟ್ಟು ಅನ್ವಯವಾಗತಕ್ಕದ್ದು.

(2) ರಿಸರ್ವ್ ಬ್ಯಾಂಕು, ಗೊತ್ತುಪಡಿಸಿದ ವ್ಯಾಪಾರ ಭಂಡಾರಿಯು ಅರ್ಜಿ ಸಲ್ಲಿಸಿದಾಗ ಅಥವಾ ಅನ್ಯಥಾ, ಕಾಲಕಾಲಕ್ಕೆ ಅಗತ್ಯವೆಂದು ಭಾವಿಸುವಂಥ ಇತರ ಸೇವೆಗಳನ್ನು ಒದಗಿಸಲು ಗೊತ್ತುಪಡಿಸಿದ ವ್ಯಾಪಾರ ಭಂಡಾರಿಗೆ ಅನುಮತಿ ಅಥವಾ ನಿರ್ದೇಶನ ನೀಡಬಹುದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಗೊತ್ತುಪಡಿಸಿದ ವ್ಯಾಪಾರ ಭಂಡಾರಿ" ಎಂಬ ಪದಾವಳಿಗೆ, ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ, ವ್ಯಾಪಾರ ಭಂಡಾರಿ ಅಥವಾ ವ್ಯಾಪಾರ ಭಂಡಾರಿಗಳ ವರ್ಗ ಎಂಬ ಅರ್ಥವಿರತಕ್ಕದ್ದು.

**34ಬಿ. ರಿಸರ್ವ್ ಬ್ಯಾಂಕ್‌ನ ಅಧಿಕಾರಗಳು ಅಂತರಾಷ್ಟ್ರೀಯ ಆರ್ಥಿಕ ಸೇವೆಗಳ ಕೇಂದ್ರಕ್ಕೆ ಅನ್ವಯಿಸದಿರುವುದು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ರಿಸರ್ವ್ ಬ್ಯಾಂಕ್‌ನ ಮೂಲಕ ಚಲಾಯಿಸತಕ್ಕ ಪ್ರದತ್ತವಾದ ಅಧಿಕಾರಗಳನ್ನು,–

ಅಂತರಾಷ್ಟ್ರೀಯ ಆರ್ಥಿಕ ಸೇವಾ ಕೇಂದ್ರಗಳಲ್ಲಿ ಅನುಮತಿಸಲಾಗಿರುವ ಹಣಕಾಸು ಉತ್ಪತ್ತಿಗಳಿಗೆ, ಆರ್ಥಿಕ ಸೇವೆಗಳಿಗೆ ಮತ್ತು ಹಣಕಾಸು ಸಂಸ್ಥೆಗಳಿಗೆ ವಿನಿಯಮಿಸುವಷ್ಟರ ಮಟ್ಟಿಗೆ,–

(ಎ) ವಿಶೇಷ ಆರ್ಥಿಕ ವಲಯ ಅಧಿನಿಯಮ, 2005 (2005 ರ 28)ರ ಪ್ರಕರಣ 18 ರ ಉಪಪ್ರಕರಣ (1)ರ ಮೇರೆಗೆ ಸ್ಥಾಪಿಸಿದ ಅಂತರಾಷ್ಟ್ರೀಯ ಆರ್ಥಿಕ ಸೇವಾ ಕೇಂದ್ರಕ್ಕೆ ಅನ್ವಯಿಸತಕ್ಕದ್ದಲ್ಲ;

(ಬಿ) ಅಂತರಾಷ್ಟ್ರೀಯ ಆರ್ಥಿಕ ಸೇವಾ ಕೇಂದ್ರಗಳ ಪ್ರಾಧಿಕಾರ ಅಧಿನಿಯಮ, 2019, ಪ್ರಕರಣ 4 ರ ಉಪಪ್ರಕರಣ (1)ರ ಮೇರೆಗೆ ರಚಿಸಿದ ಅಂತರಾಷ್ಟ್ರೀಯ ಆರ್ಥಿಕ ಸೇವಾ ಕೇಂದ್ರಗಳ ಪ್ರಾಧಿಕಾರದ ಮೂಲಕ ಚಲಾಯಿಸತಕ್ಕವುಗಳಾಗಿರತಕ್ಕದ್ದು.

**35. ಕೆಲವು ವ್ಯಕ್ತಿಗಳನ್ನು ಲೋಕ ನೌಕರರೆಂದು ಭಾವಿಸುವುದು.–** ಈ ಅಧಿನಿಯಮದ ಮೇರೆಗೆ ಯಾವುದೇ ಅಧಿಕಾರವನ್ನು ರಿಸರ್ವ್ ಬ್ಯಾಂಕಿನ ಯಾವ ಅಧಿಕಾರಿಗೆ ವಹಿಸಲಾಗಿದೆಯೋ, ಆ ಪ್ರತಿಯೊಬ್ಬ ಅಧಿಕಾರಿಯನ್ನು ಭಾರತ ದಂಡ ಸಂಹಿತೆ (1860 ರ 45)ಯ ಪ್ರಕರಣ 21ರ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನೆಂದು ಭಾವಿಸತಕ್ಕದ್ದು.

**36. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮಕ್ಕೆ, ಅದರ ಮೇರೆಗೆ ರಚಿಸಿದ ವಿನಿಯಮಗಳಿಗೆ ಮಾಡಿದ ಆದೇಶಕ್ಕೆ ಅಥವಾ ನೀಡಿದ ನಿರ್ದೇಶನಕ್ಕೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದರಿಂದಾದರೂ ಆಗಿರುವ ಯಾವುದೇ ಹಾನಿಗಾಗಿ ಅಥವಾ ಆಗುವ ಸಂಭವವಿರುವ ಯಾವುದೇ ಹಾನಿಗಾಗಿ ಕೇಂದ್ರ ಸರ್ಕಾರದ, ರಿಸರ್ವ್ ಬ್ಯಾಂಕಿನ ಅಥವಾ ಅದರ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**37. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸುವುದಕ್ಕೆ ಅವಶ್ಯವೆಂದು ಕಂಡುಬರುವ, ಅಥವಾ ವಿಹಿತವೆಂದು ತನಗೆ ತೋರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಮುಕ್ತಾಯದ ನಂತರ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ನಂತರ ಸಾಧ್ಯವಾಗಬಹುದಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**38. ವಿನಿಯಮಗಳನ್ನು ರಚಿಸಲು ರಿಸರ್ವ್ ಬ್ಯಾಂಕ್‌ನ ಅಧಿಕಾರ.–** (1) ರಿಸರ್ವ್ ಬ್ಯಾಂಕ್, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆ ಮೂಲಕ, ಈ ಅಧಿನಿಯಮಗಳಿಗೆ ಸುಸಂಗತವಾದ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಉಪಬಂಧದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮಗಳಲ್ಲಿ, ಈ ಕೆಳಕಂಡ ಎಲ್ಲ ವಿಷಯಗಳಿಗೆ ಅಥವಾ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಪ್ರಕರಣ 3ರ ಉಪಪ್ರಕರಣ (2)ರ ಮೇರೆಗೆ ಸ್ಥಾಪಿತವಾದ ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಹಾಗೂ ಉಪಪ್ರಕರಣ (4)ರ ಮೇರೆಗೆ ಅದರ ಸಭೆಗಳು ನಡೆಯುವ ಕಾಲ ಮತ್ತು ಸ್ಥಳ ಹಾಗೂ ಅದರ ಸಭೆಗಳಲ್ಲಿ (ಅಂಥ ಸಭೆಗಳಲ್ಲಿ ಇರಬೇಕಾದ ಕೋರಂ ಒಳಗೊಂಡಂತೆ) ಅದು ಅನುಸರಿಸಬೇಕಾದ ಕಾರ್ಯವಿಧಾನ;

(ಬಿ) ಪ್ರಕರಣ 5ರ ಉಪಪ್ರಕರಣ (2)ರ ಮೇರೆಗೆ, ಸಂದಾಯ ವ್ಯವಸ್ಥೆಯನ್ನು ಪ್ರಾರಂಭಿಸಲು ಮತ್ತು ನಿರ್ವಹಿಸಲು ಅಧಿಕಾರ ನೀಡಿಕೆಗಾಗಿ ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದೋ ಆ ನಮೂನೆ ಮತ್ತು ರೀತಿ ಮತ್ತು ಅಂಥ ಅರ್ಜಿಯ ಜೊತೆ ಇರತಕ್ಕ ಫೀಜುಗಳು;

(ಸಿ) ಈ ಅಧಿನಿಯಮದ ಮೇರೆಗೆ ಸಂದಾಯ ವ್ಯವಸ್ಥೆಯನ್ನು ನಿರ್ವಹಿಸಲು ಅಧಿಕಾರ ನೀಡಿಕೆಯನ್ನು ಪ್ರಕರಣ 7ರ ಉಪಪ್ರಕರಣ (2)ರ ಮೇರೆಗೆ ಯಾವ ನಮೂನೆಯಲ್ಲಿ ನೀಡತಕ್ಕದ್ದೋ ಆ ನಮೂನೆ;

(ಡಿ) ಪ್ರಕರಣ 10ರ ಉಪಪ್ರಕರಣ (1)ರ ಮೇರೆಗೆ ಸಂದಾಯ ವ್ಯವಸ್ಥೆಗಳು ಪಾಲಿಸಬೇಕಾದ ಮಾನಕಗಳನ್ನು ನಿರ್ಧರಿಸುವುದಕ್ಕೆ ಸಂಬಂಧಪಟ್ಟ ಸಂದಾಯ ಸೂಚನೆಗಳ ನಮೂನೆ ಮತ್ತು ಇತರ ವಿಷಯಗಳು;

(ಇ) ರಿಸರ್ವ್ ಬ್ಯಾಂಕ್ ಪ್ರಕರಣ 12ರ ಮೇರೆಗೆ ಸಲ್ಲಿಸಬೇಕೆಂದು ಅಗತ್ಯಪಡಿಸಿದ ಮಾಹಿತಿಯನ್ನು ಅಥವಾ ವಿವರಪಟ್ಟಿಕೆಗಳನ್ನು ಯಾವ ಮಧ್ಯಂತರಗಳಲ್ಲಿ ಮತ್ತು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಒದಗಿಸತಕ್ಕದ್ದೋ ಆ ಮಧ್ಯಂತರಗಳು ಮತ್ತು ಆ ನಮೂನೆ ಮತ್ತು ರೀತಿ;

(ಎಫ್) ವಿನಿಯಮಿಸಬೇಕಾದ ಅಥವಾ ವಿನಿಯಮಿಸಬಹುದಾದಂಥ ಇತರ ವಿಷಯಗಳು.

(2) ಈ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ವಿನಿಯಮವು, ಆ ವಿನಿಯಮದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮುಂಚಿನ ಅಥವಾ ತರುವಾಯದ (ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕಕ್ಕಿಂತ ಮುಂಚಿನದಲ್ಲದ) ದಿನಾಂಕದಿಂದ ಪರಿಣಾಮಕಾರಿಯಾದುದಾಗಿರತಕ್ಕದ್ದು.

(3) ಪ್ರತಿಯೊಂದು ವಿನಿಯಮವನ್ನು, ರಿಸರ್ವ್ ಬ್ಯಾಂಕು ಅದನ್ನು ರಚಿಸಿದ ತರುವಾಯ ಸಾಧ್ಯವಾಗಬಹುದಾದಷ್ಟು ಬೇಗನೆ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು, ಅದರ ಒಂದು ಪ್ರತಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಎರಡೂ ಸದನಗಳು ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಒಪ್ಪಿದರೆ, ಅಥವಾ ಎರಡೂ ಸದನಗಳು ಆ ವಿನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಆ ತರುವಾಯ ಆ ವಿನಿಯಮವು, ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.